ಅಪರಂಜಿ



ತ್ರೀನಗೆಯ ಕಾರಂಜಿ

ಸಂಪುಟ–೨

ಸಂಚಿಕೆ–೨

ನವೆಂಬರ್-೮೪

ಈ ಸಂಚಿಕೆಯ ಲೇಖಕರು........

- ☐ ಕೇಫ
- ☐ ಆನಂದ್
- ☐ ಶ್ರೀರಂಗ
- ☐ ಶ್ರೀಮತಿ ಪ್ರೇಮಾಭಟ್
- ☐ ವಿ. ಜಿ. ಭಟ್
- ☐ ಕಪಟಕವಿ
- ☐ ಸೋಮಿ
- ☐ ಶ್ರೀಮತಿ ಲೀಲಾಮಿರ್ಲೆ
- ☐ ಎಂ. ಎಸ್. ಕೆ.
- ☐ ಶಿವಕುಮಾರ್

ಬಿಡಿಪ್ರತಿ :
ಒಂದು ರೂಪಾಯಿ ಮಾತ್ರ

ಅ ಪ ರ ಂ ಜಿ

ಗೌರವ ಸಲಹೆಗಾರರು :
ಶ್ರೀ ಅ.ರಾ.ಸೇ
ಶ್ರೀ ಶೇಷಗಿರಿ

ಸಂಪಾದಕರು ಮತ್ತು ಪ್ರಕಾಶಕರು :
ಶ್ರೀ ಶಿವಕುಮಾರ್

ವಾರ್ಷಿಕ ಚಂದಾ : ರೂ. 15-00

ಮ ನ ವಿ

ಇಂದಿನಿಂದ ಅಪರಂಜಿ ಮುಕ್ತ ಮಾರುಕಟ್ಟೆಯಲ್ಲಿ ಲಭ್ಯ. ಬಿಡಿಪ್ರತಿಯ ಬೆಲೆ ಒಂದು ರೂಪಾಯಿ. ಇದಕ್ಕನುಗುಣವಾಗಿ ವಾರ್ಷಿಕ ಚಂದಾ ಶುಲ್ಕವನ್ನು (ಅಂಚೆ ವೆಚ್ಚಸೇರಿ) ಹದಿನೈದು ರೂ. ಗಳಿಗೆ ನಿಗದಿಸಿದ್ದೇವೆ. ಈಗಾಗಲೇ ಇಪ್ಪತ್ತೈದು ರೂ. ಚಂದಾಹಣ ನೀಡಿರುವವರಿಗೆ ಹದಿನೆಂಟು ಸಂಚಿಕೆಗಳನ್ನು ಕಳಿಹಿಸಲು ನಿರ್ಧರಿಸಿದ್ದೇವೆ.

ಚೆಕ್ಕುಗಳನ್ನು " ಅಪರಂಜಿ " ಹೆಸರಿಗೆ ಕಳುಹಿಸಬಹುದು.

ಶಿವಕುಮಾರ್
ಸಂಪಾದಕ

ಅಪರಂಜಿ ಕಾರ್ಯಾಲಯ
36, 6ನೇ ಮುಖ್ಯ ರಸ್ತೆ
ಮಲ್ಲೇಶ್ವರ
ಬೆಂಗಳೂರು–560 003

ಈ ಸಂಚಿಕೆಯಲ್ಲಿ........

'ಮಂದಾರ' ಧಾರವಾಹಿ ಮುಂದಿನ ಸಂಚಿಕೆಯಿಂದ ಮುಂದು ವರಿಯುವುದು.

—ಸಂಪಾದಕ

ವ್ಯಂಗ್ಯ ಚಿತ್ರಗಳು—ಚಂದ್ರು

ಮುದ್ರಣ : ಇಂಪ್ರೆಷನ್ಸ್, 404, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3

ಮನಸ್ಸಿನಿಂದಲೇ ತನ್ನನ್ನು ಉದ್ಧಾರ ಮಾಡಿ ಕೊಳ್ಳಬೇಕು, ತನ್ನನ್ನು ಹಾಳು ಮಾಡಿಕೊಳ್ಳಬಾರದು. ಮನಸ್ಸೇ ತನ್ನ ಬಂಧು—ಮನಸ್ಸೆ ತನ್ನ ಶತ್ರು

—ಭಗವದ್ಗೀತೆ

ಕಂಬನಿ

ಶ್ರೀರಂಗರ ನಿಧನದಿಂದ ನಾಡು ಒಬ್ಬ ಧೀಮಂತ ಲೇಖಕ, ನಾಟಕಕಾರ ಹಾಗೂ ಚಿಂತಕನೊಬ್ಬನನ್ನು ಕಳೆದುಕೊಂಡಿದೆ.

ಹಿರಿಯ ಅಭಿಮಾನಿಯೊಬ್ಬರು ಕಣ್ಮರೆಯಾದುದರಿಂದ ಅಪರಂಜಿ ಹೃದಯದ ಅಳಲನ್ನು ಕಂಬನಿಗರೆದು ತೋಡಿಕೊಳ್ಳುತ್ತಿದ್ದಾಳೆ.

ದಿ॥ ರಾ.ಶಿ. ಯವರು ದಿ॥ ಶ್ರೀರಂಗರನ್ನು "ಧೀಃಶಕ್ತಿಯ ಪರ್ವತ" ಎಂದು ಕರೆಯುತ್ತಿದ್ದರು. ಅವರಿಂದ ಯೋಗ ಸೂತ್ರಗಳ ಪಾಠ ಹೇಳಿಸಿಕೊಂಡಿದ್ದರು.

ಅಪರಂಜಿಯ ಜನ್ಮದಿನೋತ್ಸವದಂದು, ಅವರು ಬಹು ಸಂತೋಷ ದಿಂದ ಅವಳನ್ನು ಹರಸಿ, ಉಡುಗೊರೆ ಇತ್ತದ್ದನ್ನು, ಅವಳ ಬಳಗ ದವರಾರು ಮರೆಯುವಂತೆಯೇ ಇಲ್ಲ. ಆ ಸಂದರ್ಭದಲ್ಲಿ ಅವರು ಆಡಿದ ಮಾತೊಂದನ್ನು ಉದ್ಧರಿಸುತ್ತಿದ್ದೇವೆ.

"ನಾನು ಹೊರಡ್ಲಿಕ್ಕೆ ತಯಾರಿದ್ದೇನೆ. ಹೋದಮೇಲೆ ಅವ ಕೇಳಿದ್ರೆ ನಾನು ಧೈರ್ಯವಾಗಿ ಹೇಳ್ತಿದೀನಿ. ನಾ ಹೇಳಿ ಕೇಳಿ ಸಂಸ್ಕೃತ ಪ್ರೊಫೆ ಸರು. ನೂರು ನಾಟಕ ಬರೆದೀನಿ, ಭರತನ ನಾಟ್ಯ ಶಾಸ್ತ್ರ ಕನ್ನಡಕ್ಕೆ ತಂದೀನಿ. ನಾಕೈದು ಕಾದಂಬರಿ ಬರೆದೀನಿ, ಗೀತಾದ ಮ್ಯಾಲೆ ಮೂರು ಪುಸ್ತಕ ಬರೆದೀನಿ........ಅಂತ"

ಪರಂಪರೆಯ ವಿವೇಕದೊಂದಿಗೆ, ಪ್ರಗತಿಯ ನಾಡಿಯನ್ನು ಅರಿತ ಆ ಹಿರಿಯ ಚೇತನಕ್ಕೆ, ಅಪರಂಜಿಯ ಕಂಬನಿಯ ಶ್ರದ್ಧಾಂಜಲಿ ಸಲ್ಲಿಸು ತ್ತಿದ್ದಾಳೆ.

—ಸಂಪಾದಕ

ತ್ರಿವಿಕ್ರಮ

—ಕೇಫ

"ನಂಬದಿರ್ದನು ತಂದೆ. ನಂಬಿದನು ಪ್ರಹ್ಲಾದ।
ನಂಬಿಯುಂ ನಂಬದಿಹ ಬಿಬ್ಬಂದಿ ನೀನು ॥
ಕಂಬದಿನೋ ಬಿಂಬದಿನೊ ಮೋಕ್ಷವವರಿಗಾಯ್ತು।
ಸಿಂಬಳದಿ ನೊಣ ನೀನು—ಮಂಕುತಿಮ್ಮ ॥ ಡಿ.ವಿ.ಜಿ.

ತಾನು ನಂಬಿದ್ದ ಸತ್ಯಗಳಿಗಾಗಿ, ತಾನು ಕಲ್ಪಿಸಿಕೊಂಡಿದ್ದ ಗುರಿಗಳಿಗಾಗಿ ತಾನು ರೂಪಿಸಿಕೊಂಡಿದ್ದ ಧ್ಯೇಯಗಳಿಗಾಗಿ ತಮ್ಮ ಜೀವನದುದ್ದಕ್ಕೂ ಹೋರಾಡಿದರು—ಇಂದಿರಾ ಗಾಂಧಿ.

ಕಾಶ್ಮೀರೀ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿ, ಪಾರಸೀ ಪತಿಯ ಕೈಹಿಡಿದು ಒಬ್ಬ ಇಟಾಲಿಯನ್, ಒಬ್ಬ ಪಂಜಾಬೀ ಸೊಸೆಯರನ್ನು ಸ್ವೀಕರಿಸಿ, ಜಾತೀಯ ಪ್ರಾಂತೀಯ ಮತ್ತು ಭಾಷಾ ದ್ವೇಷಾಸೂಯೆಗಳಿಂದ ತುಂಬಿರುವ ನಮಗೆ ಸಿಮಾತೀತತೆ ಮತ್ತು ಜಾತ್ಯಾತೀತತೆಯ ಆದರ್ಶ ತೋರಿಸಿದರು.

ಬಾಂಗ್ಲಾದೇಶ ನಿರ್ಮಾಣಕಯಾಗಿ, ಪ್ರಥಮ ಹಿಮಾಲಿಯನ್ ರ್‍ಯಾಲಿ, ಏಷಿಯಾಡ್, ನಾಮ್ ಮತ್ತು ಕಾಮನ್ವೆಲ್ತ್ ಸಮ್ಮೇಳನಗಳನ್ನು ಯಶಸ್ವಿಗೊಳಿಸಿ ತನ್ನ ಎದೆಗಾರಿಕೆ ಮತ್ತು ಅಚಲ ಕಾರ್ಯನಿಷ್ಠ ಪ್ರದರ್ಶಿಸಿದರು.

ಇಂತಹವರಿಂದಲೇ ತನಗೆ ಆಪತ್ತು ಎಂಬ ಸೂಚನೆಗಳಿದ್ದೂ, ಅಂತಹವರಿಗೇ ತಮ್ಮ ರಕ್ಷಣೆಯ ಹೊಣೆ ಒಪ್ಪಿಸಿ. ವಿಶ್ವಾಸ ಘಾತಕತನಕ್ಕೆ ಬಲಿಯಾದರು. ಅವರ ಸಾವು ಅವರ ಧೈರ್ಯಕ್ಕೆ ಮತ್ತು ಅವರ ಸಂಪೂರ್ಣ ದ್ವೇಷರಹಿತ ಹೃದಯಕ್ಕೆ ನಿದರ್ಶನ—ಅವರ ಸಾವಿನ ರೀತಿ, ನಮ್ಮನ್ನಾಳುವವರ ಸಂಪೂರ್ಣ ರಾಜತಂತ್ರ ಅಜ್ಞಾನಕ್ಕೆ ನಿದರ್ಶನ. ಅಥವಾ ಜಾರ್ಜ್ ಆರ್ವೆಲ್ಲನ "1984" ಸುಪ್ರಸಿದ್ಧ ಕೃತಿಯ ಭವಿಷ್ಯವಾಣಿ—ಭಾರತದಲ್ಲಿ ಕಿಡಿ ಹಾರಿಸಿತೋ ?

"ಇಂದಿರಾ ಗಾಂಧಿಯವರ ನಿಧನದಿಂದ ಒಂದು ಪರ್ವ ಮುಕ್ತಾಯವಾಯ್ತು. ಸುಮಾರು ಎರಡು ದಶಕಗಳ ಕಾಲ ನಮ್ಮ ದೇಶದ ರಾಜಕೀಯ ರಂಗದಮೇಲೆ ಬೃಹತ್ ವ್ಯಕ್ತಿಯಾಗಿ ಶೋಭಿಸಿದರು. ಅವರ ಅನೇಕ ಧೋರಣೆಗಳನ್ನು, ಆಡಳಿತ ಶೈಲಿಯನ್ನು ನಾವು ಪ್ರತಿಭಟಿಸಿದ್ದೇವೆ. ಆದರೆ ಅವರ ಅಚಲ ದೇಶ ಪ್ರೇಮಕ್ಕೆ, ಕೆಚ್ಚೆದೆಗೆ ಕಾರ್ಯ ನಿಷ್ಠೆಗೆ ಮತ್ತು ಉನ್ನತ ವ್ಯಕ್ತಿತ್ವಕ್ಕೆ ಅವರನ್ನು ಮೆಚ್ಚಿಕೊಂಡಿದ್ದೇವೆ—ಗೌರವಿಸಿದ್ದೇವೆ" (ಎಲ್. ಕೆ. ಅದ್ವಾನಿ)

'ಇಂದಿರಾ ಗಾಂಧಿಯವರು ಭಾರತೀಯರಾದ ನಮ್ಮ ಪ್ರತಿಯೊಬ್ಬರಲ್ಲೂ ಒಂದು ಭಾಗವಾಗಿದ್ದರು. ನಮ್ಮ ಆ ಭಾಗವನ್ನು ಕಳೆದುಕೊಂಡಿದ್ದೇವೆ.

ಆ ತ್ರಿವಿಕ್ರಮಗೆ ನಮನ.

ಅಪರಂಜಿ ಕಿಡಿ

—ಆನಂದ್

ಅಣುಶಕ್ತಿ ಬಗ್ಗೆ ಆರಾಮ ಕುರ್ಚಿಯಲ್ಲಿ ಕುಳಿತು ಟೀಕೆ ಮಾಡುವುದುಸಲ್ಲದು

—ಶ್ರೀ ರಾಜಾ ರಾಮಣ್ಣ

ಆ ಕುರ್ಚಿಗಳನ್ನೆಲ್ಲ ಕೂಡಲೆ ತೆಗೆದುಬಿಡಬೇಕೆಂದು ಸರ್ಕಾರ ಸುಗ್ರೀವಾಜ್ಞೆ ಹೊರಡಿಸುತ್ತೇನೋ!

* * * * *

ಭಾನುವಾರಪ್ಪಾ ಏನಯ್ಯ. ಲೆಕ್ಕ ಪತ್ರ ಅಂದದ್ದಕ್ಕೆ. ಸ್ನೇಹಿತನೊಬ್ಬ ಇವತ್ತು Auditya ವಾರ ಅಲ್ಲವೇನೋ ಅನ್ನೋದೆ.?

* * * * *

ಚುನಾವಣೆ ಕ್ರೀಡೆಯಲ್ಲ

—ವಾಚಕರ ವಾಣಿ

ಅದೊಂದು ದುರಂತ ನಾಟಕ!

* * * * *

ಹೃದಯ ಬಲಗಡೆ ಇರುವ ಯುವಕನೊಬ್ಬ ಅದೇ ತರಹ ಹುಡುಗಿಯನ್ನೇ ಹುಡುಕುತ್ತಿದ್ದಾನಂತೆ.

—ಸುದ್ದಿ

ಹೃದಯವಂತಿಕೆ ಅಂದರೆ ಇದು!

* * * * *

ಹೊಟಲ್ ಮುಂದೆ ಬೋರ್ಡು :—

"ದಯವಿಟ್ಟು ಉಗಳಬೇಡಿ"

ಅವರು ತಾವೇ ಹೀಗೆ ಹೇಳಬಹುದೆ ?

* * * * *

ಬೆಳಗಾವಿಯಲ್ಲಿ ಕರ್ಫ್ಯೂ

'ಬೆಳಗಾವಿಯಲ್ಲಿ ಟಿ. ವಿ ಇಂದು ಆರಂಭ'

(ದಿನಪತ್ರಿಕೆಯಲ್ಲಿ ಒಂದೇ ಪುಟದಲ್ಲಿ ಸುದ್ದಿ)

ಸರಿ, ಹೊಟ್ಟೆಗೆ ಹಿಟ್ಟಿಲ್ಲ.......

ತಲೆನೋವಿರುವ ಮಹಿಳೆಯರಿಗೆ ಹೆಚ್ಚು ಆಯುಸ್ಸು

—ಸುದ್ದಿ

ಸುದ್ದಿ ತಲೆನೋವು ತರುವಂತಿದೆ!

* * * * *

ಮೈಸೂರು ಸುದ್ದಿ :—ಸರ್ಕಾರದ ಕಾರ್ಯಗತಿಯನ್ನು 'ಆಮೆಯ ವೇಗ' ಎಂದು ಹೀಯಾಳಿಸುವುದನ್ನು ಮೈಸೂರು ಜೂನ ಆಮೆಗಳು ಖಂಡಿಸಿವೆಯಂತೆ.

ತಲೆ ತಪ್ಪಿಸಿಕೊಂಡೆ!

—ಶ್ರೀರಂಗ

ನಿಜವಾಗಿ ನಾನು ಕೊರವಂಜಿಗಾಗಿ ಬರೆದ ಲೇಖ ಇವಲ್ಲ! ಇನ್ನೊಂದನ್ನ ಬರೆದಿದ್ದೆ; ಅದನ್ನು ನೋಡಿದ್ದರೆ ನೀವು-ಎಂದರೆ ನಿಮ್ಮ ಓದುಗರು ಎಷ್ಟು ಮೆಚ್ಚ ಬಹುದಾಗಿತ್ತು! ಆದರೇನು? ಅದು ಕಳೆದು ಹೋಯಿತು! ಮನೆ ತುಂಬ ಅದನ್ನ ಶೋಧಿಸಿದೆ. ಕೊನೆಗೆ ಸರಕಾರೀ ಫೈಲ್ ಅಂತ ತಿಳಿದು ಅದನ್ನು ರದ್ದೀ ಪೇಪರ್ ಅಂತ ರವಾನಿಸಿರಬಹುದೇನೋ ಅನ್ನೋ ಸಂಶಯದಿಂದ ಸೆಟ್ಟರ ಅಂಗ್ಡೀಗೂ ಹೋದೆ ಸೆಕೆಂಡ್ ಹ್ಯಾಂಡ್ ಪುಸ್ತಕಗಳ ವ್ಯಾಪಾರಾಟಗಾರರ ಕಡೆ ಹೋದೆ ಅಲ್ಲಿ ನನ್ನ ಒಂದು ಪುಸ್ತಕದ ಹೊರೆತು ಬೇರೆ ಏನೂ ನನ್ನದು ಅನ್ನೋದು ಸಿಕ್ಕಲಿಲ್ಲ. ಕೊನೆಗೆ ಮತ್ತೆ ಮನೆಯಲ್ಲಿ ಶೋಧಿಸ ತೊಡಗಿದೆ. ತಟ್ಟನೆ ಹೊಳೆಯಿತು. ಅಡುಗೆ ಮನೆಯಲ್ಲಿ ಅದರ ಪ್ರಯೋಜನ ಸಕಾಲಿಕವಾಗಿರಬಹುದು ಅಂತ ಅಲ್ಲಿ ಹೋದೆ.

ಹೋದೆನೇನೊ ನಿಜ. ಆದರೆ ಅಲ್ಲಿ ಬೇರೆ ಪ್ರಕರಣನೇ ಬೆಳೆಯಿತು ನಾನೇನೊ ಸದುದ್ದೇಶದಿಂದ ಹೋಗಿದ್ದೇನಾದರೂ ಯಾವ ಅಧಿಕಾರದಿಂದ ಹೋಗಿದ್ದೆನಾದರೂ ಯಾವ ಅಧಿಕಾರದಿಂದ ಹೋಗಿದ್ದೆ ಅನ್ನೋ ಪ್ರಶ್ನದಿಂದ ಪ್ರಾರಂಭ ಆಯ್ತು ಆ ಪ್ರಕರಣ.

"ಇಲ್ಲಿ ಯಾಕೆ ಬಂದಿರಿ?" ಎಂದರು ನನ್ನವರು

"ನನ್ನ ಲೇಖ ಹುಡುಕಲಿಕ್ಕೆ" ಎಂದೆ,

"ಅಕ್ಕಿ ಬೇಯಿಸುವಷ್ಟು ಕಾವು ನಿಮ್ಮ ಲೇಖದಲ್ಲಿ ಇದೆ ಅಂತ ನನಗ್ಗೊತ್ತಿರ ಲಿಲ್ಲ.

"ಛೆ! ತಪ್ಪು ತಿಳಿಯ ಬೇಡ. ಬಿಸಿ ಪಾತ್ರೆ ಎತ್ತುವಾಗ ಕೈಗೆ ಅನುಕೂಲ ಅಂತ"

"ಇಲ್ಲಿ ಏನು ಯಾರ ಕೈಯ್ಯೂ ಸುಟ್ಟಿಲ್ಲ ನಿಮ್ಮನ್ನ ಒಳಗೆ ಬಿಟ್ಟು ಕೈ ಸುಟ್ಟಗೊಳ್ಳೋದೂ ನನಗೆ ಬೇಕಿಲ್ಲ" ಎಂದರು.

"ನನ್ನಷ್ಟಕ್ಕೆ ನಾನು ನೋಡಿಕೊಂಡು ಹೋದರೆ–" ನನ್ನ ದನಿಯಲ್ಲಿ ಹಟ ಇದ್ದುದನ್ನು ಕಂಡು ಅಷ್ಟೆ ಹಟದಿಂದ "ನೀವಿಲ್ಲಿ ಬರೋದೇ ಬ್ಯಾಡ" ಎಂದರು ನಮ್ಮವರು.

ನನಗೆ ಆಶ್ಚರ್ಯವಾಯಿತು. ಎಂದೂ ಇಲ್ಲದ ಈ ರಭಸ ಇಂದ್ಯಾಕೆ? "ಅಲ್ಲ ಒಳಗೆ ಬಂದ್ರೇನಾಯ್ತು? ಎಂದೆ. ನನಗೆಲ್ಲಾ ಗೊತ್ತಿದೆ. ನಾನು ಪೇಪರ್ ಓದುತ್ತಾ ಇರ್ತೀನಿ. ಈ ಆಟ ಎಲ್ಲಾ ಗೊತ್ತು" ಎಂದಳು

ನನಗೆ ಇನ್ನಷ್ಟು ಆಶ್ಚರ್ಯವಾಯಿತು. ನಾನು ಆಗಾಗ ಅಡುಗೆ ಮನೆಯಲ್ಲಿ ಹೋಗುತ್ತಿರುವುದು ಪೇಪರ್‌ಗಳಲ್ಲಿ ಪ್ರಕಟವಾಗಬಹುದೆಂಬ ಕಲ್ಪನೆಯೂ ನನಗಿದ್ದಿರ ಲಿಲ್ಲ. ಆ ಮಾತನ್ನು ಆಡಿಯೂ ತೋರಿಸಿದೆ.

"ಅದನ್ನ ಹೇಳಲಿಲ್ಲ, ಗಂಡಸರ ಸ್ವಭಾವ ಹೇಳಿದೆ" ಎಂದರು "ಅಹ! ಅಷ್ಟೇನು ನೀವು ಆಶ್ಚರ್ಯ ತೋರಿಸೋ ಕಾರಣಿಲ್ಲ. ಈಗ ದೇಶದ ತುಂಬ ಇದೇ ನಡೆದಿದೆ" ಎಂದರು.

ನನಗೆ ಇನ್ನಷ್ಟು ಆಶ್ಚರ್ಯ. ದೇಶದ ತುಂಬ ಗಂಡಸರಲ್ಲಿ ನಿರುದ್ಯೋಗ ಬೆಳೆಯುತ್ತಿದೆ ಎಂಬುದನ್ನು ನಾನೂ ಓದಿದ್ದೆ. ಆದರೆ ಅದಕ್ಕಾಗಿ ಗಂಡಸರು ಅಡುಗೆ ಮನೆಯಲ್ಲಿ ನುಗ್ಗುತ್ತಿದಾರೆ ಎಂದು—

"ಸಾಕು ನಿಮ್ಮ ತಮಾಷೆ! ಈಗ ಲದಾಖ್‌ನಲ್ಲಿ ಏನು ನಡೆದಿದೆ? ಬೆಳಗಾವಿ ಯಲ್ಲಿ ಏನು ನಡೆದಿದೆ?" ಎಂದು ಸವಾಲನ್ನು ಹಾಕಿದರು.

ಅಲ್ಲ ಎಲ್ಲಿಂದೆಲ್ಲಿಗೆ ಲದಾಖ್‌ದಲ್ಲಿ ಚೂಎನ್ ಲೈ ಅವರ ಪ್ರತಿಮೆ. ಬೆಳಗಾವಿಯಲ್ಲಿ ಚೆನ್ನಮ್ಮ ರಾಣಿಯ ಪ್ರತಿಮೆ.

"ಆದರೂ ನೋಡಿರಲ್ಲ? ಲದಾಖ್‌ನೊಳಗೆ ಬಂದರು ಚೀನದವರು. ಇದ್ದರು. ಇದ್ದ ಮೇಲೆ ಲದಾಖ್ ನಮ್ಮದು ಅಂದರು! ಬೆಳಗಾವಿಯೊಳಗೆ? ಕಮಿಷನರ ಕಚೇರಿ ಬಂತು, ಕಚೇರಿ ಕೂಡ ಕ್ಲಾರ್ಕ್ ಪಂತೋಜಿಯವರು ಬಂದರು, ಇದ್ದರು, ಇದ್ದ ಮೇಲೆ ಬೆಳಗಾವಿ ನಮ್ಮದು ಅಂದರು—"

"ಅವರು ಹಾಗಂದ್ರೇನಾಯ್ತು? ನಾವು ಬಿಡೋದಿಲ್ಲ ಅದನ್ನ" ಎಂದು ಗಂಡಸಿಗೆ ತಕ್ಕ ಆವೇಶದಿಂದಲೆ ಪ್ರತಿಭಟಿಸಿದೆ.

"ಅದನ್ನ ನನ್ನ ಮುಂದೆ ಯಾಕೆ ಹೇಳ್ತೀರಿ ಅಸೆಂಬ್ಲೀವಳಗೆ ಹೇಳಿಧಾಗೆ? ಅವರಿಗ್ಹೋಗಿ ಹೇಳಿರಿ ನೋಡೋಣ"? ಎಂದು ನನ್ನನ್ನು ಕೆಣಕಿದರು.

"ಹೇಳ್ತೀವಲ್ಲ? ಆದರೆ— ಯಾವುದಾದರೂ ಶಾಂತಿ—ಸಂಧಾನಗಳಿಂದಲೆ ಆಗತಕ್ಕದ್ದು ಹೊರತು —"

"ನಿಂಕೂಡ ಶಾಂತಿಸಂಧಾನಕ್ಕೆ ತೊಡಗಿದರೆ ಮಧ್ಯಾಹ್ನ ಅಡಿಗೆ ಸಾಯಂಕಾಲಕ್ಕೇ ಮುಗಿದೀತು."

"ಅಲ್ಲ; ನಾನು ಹೇಳೋದು ಅಂದ್ರೆ—ನೋಡು, ಇಷ್ಟು ಗಲಭೆ ಆದರೂ ಪೋಲೀಸರದೂ ತಲೆ ಒಡೆದಿದೆ. ಅವರ ತಲೆಗೇನಾದರೂ—"

"ಅವರಿಗೆ ತಲೇನೇ ಇಲ್ಲ, ಒಡೆಯೋದೆಲ್ಲಿಂದ ಬಂತು? ನಿಮಗೆ ತಲೆ ಇದೆಯೋ ಇಲ್ಲವೊ ಹೇಳಿರಿ."

"ಇದೆ" ಎಂದು ನಗೆಯಿಂದಲೆ ಹೇಳಿದೆ.

"ಹಾಗಿದ್ದರೆ ಅದನ್ನ ಉಳಿಸಿಕೊಳ್ಳೋದಾದರೆ ತತ್‍ಕ್ಷಣ ಇಲ್ಲಿಂದ ಹೊರಡಿ."

ನಾನು ಬೆಪ್ಪಾಗಿ ಅವರ ಮುಖವನ್ನೇ ನೋಡುತ್ತ ನಿಂತೆ

"ಹೊರಡಿ—ಅಂದೆ! ಇಲ್ಲಿದ್ದರೆ ದಿನಾಲು ಏನಾದರೂ ನೆಪ ಹುಡುಕಿ ಅಡುಗೇ ಮನೆಗೆ ಬರ್‍ತಾ ಬರ್‍ತಾ ಕೊನಗೆ ಒಂದು ದಿನ ಅಡುಗೆಮನೇನೂ ನನ್ದು ಅಂದೀರಿ! ಹೊರಡಿ!"

ಓಹೊ! ಇದೊಂದು ತಮಾಷೆ! ತಿಳಿಯಿತು ನನಗೆ. ನಾನು ಬರೆಯುವ ಕೋಣೆಗೆ ಅವರನ್ನು ಬರಗೊಡಲು ನಾನು ಆತುರನಿರುವುದಿಲ್ಲ ಎಂಬುದಕ್ಕೆ ಪ್ರತಿಭಟನೆ ಇದು!

"ಹಹ! ಹೀಗೆನ್ನುವೆಯಾ? ಯಾವ ಕೋಣೆ ಆದರೇನಾಯ್ತು? ಮನೆ ಒಂದೇ ಅಲ್ಲವೆ?"

"ಅಷ್ಟು ಬುದ್ಧಿ ಗಂಡಸಿಗಿದ್ದರೆ"

"ಬುದ್ಧಿ" ಎಂದ ಕೂಡಲೆ ತಲೆ ಜ್ಞಾಪಕಕ್ಕೆ ಬಂದು ಅದನ್ನು ಉಳಿಸಿಕೊಳ್ಳುವ ಅವಸರದಿಂದ ಹೊರಬಿದ್ದೆ.

ಉಳಿದಿದೆಯೆ ಇಲ್ಲವೆ ಎಂಬುದನ್ನು ಇದನ್ನೋದಿದ ವಾಚಕರೇ ಹೇಳಲಿ,

("ಕೊರವಂಜಿ" ಯಿಂದ)

ಅಪರಂಜಿಗೆ ನಮೋ ಎಂದು

ಪ್ರೇಮಾಭಟ್

ಕೊರವಂಜಿ ನಿನ್ನ ಅಂಗಿ ಧರಿಸಿ
ಬಂದ ಅಪರಂಜಿ—ನೋಡಿ
ಧನ್ಯರಾದೆವು ನಾವು
ಮಿಂಚಿ ಮಾಯವಾದ ಎಂಬ ಕೊರಗು
ನಮ್ಮ ಚಿನ್ನ ಹಿಂದೆ ಕಾಡಿದಾಗೆಲ್ಲ
ನೀನಾಡುತ್ತಿದ್ದ ಅಣಕ—
ಕೆಣಕಿ, ಕಿಣುಕಿದಂತೆಲ್ಲಾ ನಾವು
ಒಬ್ಬರ ಮುಖ ಒಬ್ಬರು ನೋಡಿಕೊಂಡದ್ದುಂಟು
ನೀನಿದ್ದಾಗ ಸದ್ದು ಮಾಡಿದ ಸಪ್ಪಳ
ಎಪ್ಪತ್ತು ದಾಟಿದವರಿಗೂ ಜೋಕು ನೀಡಿತ್ತು
ಆವತ್ತು ನೀನು ಅತ್ತ ಸಾಗಿ
ಮತ್ತೆ ಇತ್ತಿತ್ತಲಾಗಿ ಹೊಸ ಮುಖವಾಡ ಹೊತ್ತು
ಅರಸುತ್ತಲಿದ್ದವರ ಮನಕ್ಕೆ....
ಜಗಕ್ಕೆ....ಜವ್ವನಿಗಳಾಗಿ ಬಂದೆ
ಅಪರಂಜಿ ನೀನು ಬೇರೆಯಲ್ಲ
ಕೊರವಂಜಿ ಬೇರೆಯಲ್ಲ
ನಿನ್ನ ಮತ್ತು ಅವಳ ಅಂತರಂಗ ಒಂದೇ
ಅದೇ ಗಮ್ಮತ್ತು
ಅದೇ ಕೊಂಕು ಕಸರತ್ತು
ಬಿಡಿಸಿಟ್ಟ ಚಿತ್ತಾರ ಚಿತ್ರ ಚರಿತೆಯ ಸಂಪತ್ತು
ಅಪರಂಜಿ ನೀನು
ಸೊಂಪಾಗಿ ಬೆಳೆದು
—ನೂರು ಕಾಲ ಬದುಕಿ ಬಾಳಮ್ಮ ತಾಯಿ
—ನಿನ್ನ ತಿಂಗಳ ಬೆಳಕು
—ನಮ್ಮ ಅಂಗಳದ ಮುತ್ತು
—ನೂರು ಸುತ್ತು ಹಾಕಿದರೂ ಸಿಗದ
ಸಂಪತ್ತು ನೀನು ತಾಯಿ !

ಕೊರವಂಜಿ, ಅಪರಂಜಿ

—ಎ. ಜಿ. ಭಟ್ಟ

ಕೇಳಿ ಹೋದಳು ಹಿರಿಯ
ಅಬ್ಬೆ ಕೊರವಂಜಿ

ಗುಲಗಂಜೀ ಗುಲಗಂಜೀ
ಕೆಂಪು ಗುಲಗಂಜೀ
ಬೇಕೇನು ಪಂಜಿ
ಬಿಳಿ ಬಿಳೀ ಪಂಜಿ ?

ಗುಲಗಂಜೀ ಗುಲಗಂಜೀ
ತಂಪು ಗುಲಗಂಜೀ
ಬೇಕೇನು ಗಂಜಿ
ಬಿಸಿ ಬಿಸೀ ಗಂಜಿ ?

ಜೋತಾಡುತಿದ್ದ ಗುಲಗಂಜಿ
ಮಾತಾಡಲಿಲ್ಲ ಅಂಜಿ

ನಕ್ಕು ನಲಿದಾಡಿದಳು
ಪುಟ್ಟಿ ಅಪರಂಜಿ

—ಎ. ಜಿ. ಭಟ್ಟ

(ಅಪರಂಜಿ ಜನ್ಮದಿನೋತ್ಸವ ಸಮಾರಂಭದಂದು ಶ್ರೀ ಎ. ಜಿ. ಭಟ್ಟರು ರಚಿಸಿ, ನೀಡಿದ ಕವನ)

ಹಸ್ತಾಕ್ಷರ

ಕಪಟಕಪಿ



ಮಂತ್ರಿಯು ರುಜು ಮಾಡಿದನು
ಸಂತಸದಿಂದಲಿ
ನಾನದ ನೋಡಿದೆನು

ಫೈಲಿನಾ ರಾಶಿಯು ಗಗನಕ್ಕೇರಿದೆ
ಅರ್ಜಿಯು ಕಾಗದ ಚಿಂದಿಯಾಗುತ್ತಿರೆ
ನನ್ನಾಕಾಂಕ್ಷೆಯು ತೊರೆಯೋ ಬತ್ತಿರೆ
ಸಹನೆಯು ಎಲ್ಲೆಯ ಮಾಸುತ ಕಿತ್ತಿರೆ
ಮಂತ್ರಿಯು ರುಜು ಮಾಡಿದನು
ಸಂತಸ ದಿಂದಲಿ
ನಾನದ ನೋಡಿದೆನು ೧

ಬರಹರಿದಿತ್ತು, ಸಚಿವರ
ಮೊಗದಲಿ
ನಗೆ ಬಿರಿದಿತ್ತು
ವಿಧಿ ವಿಧಾನಗಳ ತೆರೆಸರಿದಿತ್ತು
ನಾನಾ ರೂಪದ ಸಿರಿ ಸಂಪತ್ತಿನ
ಹೊಂಬಿಸಿಲೆತ್ತಲು ಹರಡಿತ್ತು ೨

ಬಾಗಿಲ ಹೊರಗಡೆ ಪೂಜಾರಿ ಸಂತೆ
ಮುಕ್ತಿದ ಜನರಿಗೆ ಸ್ವಾರ್ಥದ ಚಿಂತೆ
ಮೇಜಿನ ಎಲ್ಲೆಡೆ ಕಡತದ ಕಂತೆ
ಪಿ. ಎ. ಕುಳಿತಿಹ ಬುದ್ಧನಂತೆ
ಶಿಶಿರದಿ ವಸಂತ ಮೂಡುವಂತೆ
ಮಂತ್ರಿಯು ರುಜು ಮಾಡಿದನು
ಸಂತಸ ಸಗ್ಗದಿ
ನಾನದ ನೋಡಿದೆನು ೩

(ಕುವೆಂಪು ಅವರ ಕ್ಷಮೆ ಬೇಡಿ)

ವಿರಾಟ ಭವನ

"ಕೇಫ"

ನಮ್ಮ ವಿರಾಟ ಭವನ ನಮಗೆ ಕೇವಲ ಕಾಫಿ ಕ್ಲಬ್ಬೊಂದೇ ಅಲ್ಲ. ಅದೇ ನಮ್ಮ ಸ್ಕೂಲು–ಕಾಲೇಜು. ಪಾರ್ಲಿಮೆಂಟು, ಮಾನಸಗಂಗೋತ್ರಿ, ಕೊಲೋಸಿಯಂ, ಮಾಂಟೀ ಕಾರ್ಲೋ, ಡಿಸ್ನಿಲ್ಯಾಂಡೂ, ಎವರೆಷ್ಟು, ಮ್ಯೂಸಿ-ಎಲ್ಲಾ. ವಿರಾಟ ಭವನದ ಪರುಶು-ಪರಿಚಾರಿಕೆಯು ಕಸುಬಿಗೇ ಒಂದು ವಿಶಿಷ್ಟಸ್ಥಾನ ಕಲ್ಪಿಸಿರುವವ! ಇವತ್ತು ಕೂಡ ಮಾರ್ಗರೆಟ್ ಥ್ಯಾಚರ್‌ಳ ಶಿಫಾರ್ಸ್ ಇಲ್ಲದೆ ಬಕ್ಕಿಂಗ್ ಹ್ಯಾಮ್ ಪೇಲೇಸ್‌ನಲ್ಲಿ ಪರಿಚಾರಕನ ಕೆಲ್ಸ ಗಿಟ್ಟಿಸುವ ತಾಕತ್ತಿರುವವ ವಿರಾಟಭವನಲ್ಲಿ ನಮ್ಮ ಕೂಟಕ್ಕೆ ಕಳಶಪ್ರಾಯರೆಂದರೆ ಮಲ್ಹಾರಿರಾಯರು !

ಅಷ್ಟು ಕುಳ್ಳೂ ಅಲ್ಲದ, ಅಷ್ಟು ಎತ್ತರವೂ ಅಲ್ಲದ, ಅಷ್ಟು ಸಣಕಲೂ ಅಲ್ಲದ, ಅಷ್ಟು ಸ್ಥೂಲವೂ ಅಲ್ಲದ ಸಾಕೃತಿಯ ಮಲ್ಹಾರಿರಾಯರು–ಒಬ್ಬ ವ್ಯಕ್ತಿಯಲ್ಲ ಸಂಸ್ಥೆಯೂ ಅಲ್ಲ ಅವರೇ ಒಂದು ಪರಂಪರೆ. ತಮ್ಮ ಅಷ್ಟು ಕಪ್ಪು ಅಲ್ಲದ, ಹೆಚ್ಚು ನೆರೆಯೂ ಇಲ್ಲದ ಚಿಗುರು ಮೀಸೆ ಹೊತ್ತ ಮೇಲ್ತುಟಿಯಿಂದ ಅಲಂಕೃತವಾದ ಸದಾ ಮುಗುಳ್ನಗೆ ಬೀರುತ್ತಿರುವ ಅವರ ಮುಖಕ್ಕೆ, ಅವರು ಧರಿಸುವ ಕಂಡೂ ಕಾಣದ ಹಾಗೆ ಕಸೂತಿ ಕೆಲ್ಸ ಮಾಡಿರುವ ಬೂದು ಬಣ್ಣದ ಗುಜರಾಥಿ ಟೋಪಿ– ಒಂದು ಅಪೂರ್ವ ಖಳೆ ಕೊಡುತ್ತದೆ. ಮಲ್ಹಾರಿ ರಾಯರು ತಮ್ಮ ಖಾಯಂ ಸಂಗಾತಿಯಾದ ನಡೆಕೋಲನ್ನು ಹಿಡಿದು ಕನ್ನಡಿಯಂತೆ ಹೊಳೆವ ತಮ್ಮ ಪಂಪ್ ಷೂ ಗಳನ್ನು ಮೆಟ್ಟಿ ವಿರಾಟಭವನದ ನೀಲಿ ಕೋಣೆಗೆ ಪ್ರವೇಶಿಸುವುದೇ ಒಂದು ನವಿರೇಳು ವಂತಹ ಕ್ಷಣ, ಭೋಪರಾಕ್–ಕೂಗುವಂತಹ ಸನ್ನಿವೇಶ. ಮಳೆಗಾಲದಲ್ಲಿ ಮಾತ್ರ ತುಸು ವ್ಯತ್ಯಾಸ–ನಡೆಕೋಲಿಗೆ ಬದಲಾಗಿ ಸ್ಟಾಗ್ ಬ್ರಾಂಡ್ ಸ್ಟೀಲ್ ಛತ್ರಿಧಾರಣೆ ಮಾಡುತ್ತಾರೆ. ರಾಯರು ಗಂಭೀರವಾಗಿ ನಡೆದು ನೇರವಾಗಿ ಕೋಣೆಯ ಈಶಾನ್ಯ ದಿಕ್ಕಿನಲ್ಲಿ ತಮ್ಮ ಮಾಮೂಲು ಕುರ್ಚಿಯಲ್ಲಿ ಕೂರುವುದು–ಹಿಂದೆ ರಾಜ ಮಹಾರಾಜ ರುಗಳು ಸಿಂಹಾಸನಾರೂಢರಾಗುವಂತಹ ದೃಶ್ಯವನ್ನು ನಮ್ಮ ಕಣ್ಣಮುಂದೆ ಮರು ಕಳಿಸುತ್ತದೆ.

ಮಲ್ಹಾರಿರಾಯರಿಲ್ಲದ ವಿರಾಟಭವನದ ನೀಲಿಕೋಣೆಯನ್ನು ಕಲ್ಪನೆ ಮಾಡಿ ಕೊಳ್ಳುವುದೂ ನಮಗೆ ಆಗದ ಕೆಲ್ಸ–ಚಾಮುಂಡಿ ಬೆಟ್ಟವಿಲ್ಲದ ಮೈಸೂರು ನಗರ ವನ್ನು ಕಲ್ಪಿಸಿಕೊಳ್ಳುವಂತೆ ! ನೀಲಿ ಕೋಣೆ ಕಟ್ಟುವಾಗಲೇ ಅದರ ಈಶಾನ್ಯ ದಿಕ್ಕಿ ನಲ್ಲಿ ಮಲ್ಹಾರಿರಾಯರು ಆಸೀನರಾಗಿ ತಮ್ಮ ದರ್ಬಾರ್ ನಡೆಸುವರೆಂಬ ಕಲ್ಪನೆ ಆ ಕಟ್ಟಡ ಕಟ್ಟುವಾತನಿಗೆ ಮೊದಲೇ ಇತ್ತು-ಅಂದರೆ ಆಶ್ಚರ್ಯವೇನಿಲ್ಲ. ತಮ್ಮ ಅಪಾರ

ಬ್ರಹ್ಮಾಂಡದ ಅನುಭವಗಳಿಂದಲೂ, ತಮ್ಮ ಇಷ್ಟಮೂರ್ತಿಯ ಸಾಕ್ಷಾತ್ಕಾರದಿಂದಲೂ, ರಾಯರು ತಮ್ಮ ಕೂಟದ ಸಂಜೆಗಳನ್ನು ಸಾರ್ಥಕ ಮಾಡಿದ್ದಾರೆ. ಸಾರ್ಥಕ ಮಾಡುತ್ತಿದ್ದಾರೆ. ರಾಯರ ಬಂಧು ಬಳಗ ವರ್ಗ ಅಪಾರ. ರಾಯರ ಬಾಂಧುಬಳಗ ವರ್ಗದವರ ಅನುಭವಗಳು-ಅಪಾರ. ರಾಯರು ಅಪೂರ್ವರು,

ಒಂದು ಸಂಜೆ ಮಲ್ಲಾರಿರಾಯರು ವಿರಾಟಭವನದ ನೀಲಿಕೋಣೆಯ ಈಶಾನ್ಯ ದಿಕ್ಕಿನಲ್ಲಿ ತಮ್ಮ ಕುರ್ಚಿಯಲ್ಲಿ ಕುಳಿತು ತಮ್ಮ ನಡೆಕೋಲನ್ನು ಒಂದು ಪಕ್ಕದಲ್ಲಿ ಒರಗಿಸಿ ಪಂಪ್ ಷೂಗಳಿಂದ ತಮ್ಮ ಪಾದಗಳನ್ನು ಹೊರತೆಗೆದು ಅವರ ಮುಂದೆ ಕಾದು ನಿಂತಿದ್ದ ಪರಿಚಾರಿಗೆ ಅರ್ಧಪ್ಲೇಟ್ ಖಾರದಗೋಡಂಬಿ-ಅರ್ಧಕಪ್ ಸ್ಟ್ರಾಂಗ್ ಕಾಫಿ ತರಲು ಹೇಳಿದರು. ಅವರ ಸುತ್ತ-ಪೂರ್ವ ದಿಕ್ಕಿನಲ್ಲಿ ಚೌ, ಚೌ. ಆಗ್ನೇಯದಲ್ಲಿ ಓಂಪ್ರುಡಿ ದಕ್ಷಿಣದಲ್ಲಿ ಮದ್ದೂರು ವಡೆ, ವಾಯುವ್ಯ ದಿಕ್ಕಿನಲ್ಲಿ ಬಾಳೇಕಾಯಿ ಬಜೆ ಮಾಮೂಲು ರೀತ್ಯಾ ಕುಳಿತಿದ್ದರು. ರಾಯರಿಗೆ ನೇರವಾಗಿ ನೈರುತ್ಯದಲ್ಲಿ ಆಲೂಗೆಡ್ಡೆ ಚಿಪ್ಸ್- ಟೈಗರ್ ಚಾದೊಡನೆ ನಾನು ಕುಳಿತಿದ್ದೆ. ನಮ್ಮ ಕೋಣೆಯ ಪಶ್ಚಿಮ ದ್ವಾರದಲ್ಲಿ ಒಬ್ಬ ಹೊಸಾ ಆಸಾಮಿ ಬಂದು ನಿಂತ.

ಷಕ್...ಕ್‌ಕ್...ಷಕ್ಸ್...ಷ್‌ಷ್....... ''ಅನ್ನುತ್ತಾ ತುಸಹೊತ್ತುನಿಂತ, ಹಾಗೇ ಅದೃಶ್ಯನಾದ.

"ಇವ್ಯಾವತರಾ ಭಾಷೆರೀ ಆತಂದು? ಷಕ್ ಷಕ್ಸ್ ಅಂತಾ ಏನೋವದರಿದನಲ್ಲಾ ?" ಅಂದರು ಚೌಚೌ.

"ಈಗೇನ್ರೀ ಎಲ್ಲಾ ದೇಶದೋರು ನಮ್ಮ ದೇಶಾನ ಧಾಳೀಮಾಡ್ಲಾಕ ಹತ್ತಾರ್ರೀ! ಮೊನ್ನೆ ರೇಡಿಯೋದಾಗ್ಲಿ ನಮ್ಮ ಇಂದಿರಮ್ಮನೋರು ಹೇಳಿದ್ದು ಕೇಳಿದ್ರ್ಯಾ ಇಲ್ಲೊ?—ನಮ್ಮ ಭಾರತದ ಮೇಲೆ ಪರಕೀಯರು ಕಣ್ಣು ಹಾಕ್ತಾ ಇದ್ದಾರೇ. ಅಂತ?" ಬಾಳೆಕಾಯಿ ಬಜೆ ತಮ್ಮ ಅಭಿಪ್ರಾಯ ಕೊಟ್ಟರು.

ನಮ್ಮ ಕೂಟದಲ್ಲೆಲ್ಲಾ ಹೆಚ್ಚು ವ್ಯವಹಾರ ಜ್ಞಾನ ಉಳ್ಳವರಾದರೂ ತುಸ ಅವಸರ ಪ್ರಕೃತಿಯ ಜನ–ಬಾಳೇಕಾಯಿ ಬಜೆ.

"ಯಾವ ಇಂದಿರಮ್ಮನೋರ್ರೀ? ನಿಮುತ್ತೀನೇನು?"—ಓಂಪ್ರುಡಿ ಕೇಳಿದರು.

ಓಂಪ್ರುಡಿ ಅಷ್ಟು ವ್ಯವಹಾರಸ್ಥರಲ್ಲದವರಾದರೂ ಚುರುಕು ಬುದ್ಧಿಯುಳ್ಳವರು. ಓಂಪ್ರುಡಿ–ಬಾಳೇಕಾಯಿಬಜೆ–ಪರಸ್ಪರ–ಮೊರಾರ್ಜೀದೇಸಾಯಿ-ಸಂಜೀವರೆಡ್ಡಿ ಇದ್ದ ಹಾಗೆ. ಅಷ್ಟೇ ಸ್ನೇಹ.

"ನಮ್ಮತ್ತೀ ಹೆಸ್ರು ಸುಂದರಮ್ಮ ರೀ. ಇಂದಿರಮ್ಮ ಯಾರು ಅಂತ ಗೊತ್ತಿಲ್ಲದ

ಜನ ಭಾರತದಲ್ಯಾಕ್ರೀಇರ್ಬೇಕು ? ನಮ್ಮ ಪ್ರಧಾನಿ ಕಣ್ರೀ–ಪ್ರೈಮ್‌ಮಿನಿಸ್ಟ್ರು !" ಅಂದರು ಬಾಳೇಕಾಯಿ ಬಜೆ.

ಈಶಾನ್ಯ ದಿಕ್ಕಿನಿಂದ ಒಂದು ಅರ್ಥಪೂರ್ಣ ಕೆಮ್ಮು ಕೇಳಿಬಂತು.

"ಆತ ಶತ್ರುವಲ್ಲ. ಆಡಿದ್ದು ಪ್ರಾಚ್ಯ ಭಾಷೆಯೂ ಅಲ್ಲ. ಪ್ರಾಯಶಃ ಆತನಿಗೆ ಬಿಕ್ಕಲಿರಬೇಕು. 'ಕ್ಷಮಿಸ್ಸಿ-ಒಳಗೆ ಬರಬಹುದೇ ?'-ಅಂತ ಕೇಳ್ಳೋಕೆ ಶುರು ಮಾಡಿ ಬಿಕ್ಕಲಿನಿಂದ ನಾಚಿ ಹೊರಟು ಹೋಗಿರಬೇಕು"

ಇದನ್ನು ಹೇಳಿದವರು ಮಲ್ಲಾರಿರಾಯರು. ನಮ್ಮ ಕೂಟದಲ್ಲಿ ಒಂದು ರೀತಿಯ ಶಾಂತಿ ಏರ್ಪಟ್ಟಿತು.

"ಅಂದರೆ ಆತ ಕನ್ನಡಿಗನೇ ಅನ್ನಿ !" ಬಾಳೇಕಾಯಿ ಬಜೆ ತುಸು ಧೈರ್ಯಮಾಡಿ ಕೇಳಿದರು.

"ಇನ್ನೇನು ಅಲಾಸ್ಕಾದಿಂದ ಬಂದೋನು ಅಂದು ಕೊಂಡ್ರೇನು ?" ಓಂಪ್ರುಡಿ ಪ್ರಶ್ನಿಸಿದರು.

"ಅಲಾಸ್ಕಾದೋರು ಕನ್ನಡ ಮಾತಾಡಬಾರ್ದೂಂತ ನೀವು ರೂಲ್ಸ್ ಮಾಡೀರೇನು ?" ಬಾ.ಬ: ಸವಾಲ್ ಹಾಕಿದರು.

ಮಲ್ಲಾರಿರಾಯರು ಅರ್ಥಪೂರ್ಣವಾಗಿ ಗುರುಗುಟ್ಟದಿದ್ದರೆ ಆ ಕ್ಷಣದ ನಮ್ಮ ನೀಲಿ ಕೋಣೆಯ ವಾತಾವರಣ ಸ್ವರ್ಣಮಂದಿರದ ತರಹ ಆಗುತ್ತಿತ್ತು.

"ಕೇವಲ ಒಬ್ಬ ಬಿಕ್ಕಲು ಮನುಷ್ಯನನ್ನು ನೋಡಿ ನಾವು ಇಷ್ಟು ಭಯಪಡ ಬೇಕಾಗಿಲ್ಲ. ನನ್ನ ಅಣ್ಣನ ಮಗ ಶಾಂತಾರಾಮನಿಗೂ ಬಿಕ್ಕಲಿತ್ತು. ಈಗ ನೋಡಿ ದಿರಲ್ಲ-ಆತ "ಷಕ್"-"ಷಕ್" ಅಂತ ಎರಡು ಅಕ್ಷರಗಳನ್ನಾದರೂ ಜೋಡಿಸಿದ. ನಮ್ಮ ಶಾಂತಾರಾಮ-ಕೇವಲ-'ಷ್'-ಅನ್ನುವುದರೊಳಗೇ-ಅವನ ನಾಲಿಗೆ ಸಂಪು ಹೂಡುತ್ತಿತ್ತು."

ಮಲ್ಲಾರಿರಾಯರ ಕುಟುಂಬದ ಈ ಅಪೂರ್ವ ವಿಷಯ-ಕೂಟದಲ್ಲಿ ಒಂದು ರೀತಿ ಮಿಂಚನ್ನು ಹರಿಸಿತು.

"ತುಂಬಾ ಆಶ್ಚರ್ಯ-ನಿಮ್ಮ ಅಣ್ಣನ ಮಗನಿಗೆ ಬಿಕ್ಕಲು ಬಂದಿದ್ದು." ಅಂದರು ಮದ್ದೂರುವಡೆ.

"ಹೌದು-ನಮ್ಮ ಕುಟುಂಬಗಳಲ್ಲಿ ಇಂತಹ ರೋಗರುಜಿನಗಳು ಇಲ್ಲವೇ ಇಲ್ಲ ಎನ್ನಬಹುದು. ಧನ್ವಂತರೀವಂಶಸ್ಥರೆಂದೇ-ನಮ್ಮ ಜನಕ್ಕೆ ತಿಳಿದವರು ಪಟ್ಟಕಟ್ಟಿ ದ್ದೋದು. ನಮ್ಮಲ್ಲಿ ಅಷ್ಟು ಜಾಸ್ತಿ ಜನ ಮಿಲಿಟ್ರಿಗೆ ಸೇರ್ದಿದ್ರೂ-ಬಹಳಷ್ಟು ಜನ ಎಂಥಾ ತಪಾಸಣೇನೂ ಇಲ್ದೆ ಮಿಲಿಟ್ರಿಗೆ ಸೇರುಕ್ಕೆ ಲಾಯಕ್ಕು-ಅಂತಲೇ ಹೆಸರು

ಒಂದಿರೋದು-ಹಾಗೇ ನೋಡಿ-ಶಾಂತಾರಾಮ ಬಿಕ್ಕಲನ್ನ ಪೂರ್ತಿಗೆದ್ದೇ ಬಿಟ್ಟ !" ಅಂದರು ರಾಯರು.

"ಮತ್ತೂ ಆಶ್ಚರ್ಯ !" ಓಂಪ್ರಡಿ, ಚೌಚೌ, ಮುದ್ದೂರುವಡೆ-ಒಕ್ಕೊರಳಿಂದ ಒಪ್ಪಿಕೊಂಡರು.

"ಹ್ಯಾಂಗ್ರೀ ಆತು ರಾಯ್ರೇ ?" ಬಾಳೇಕಾಯಿಬಜ್ಜಿ ಅನುಮಾನದಿಂದ ಕೇಳೇ ಕೇಳಿದರು.

ನನ್ನ ಅಣ್ಣನ ಮಗ ಶಾಂತಾರಾಮ (ಮಲ್ಲಾರಿರಾಯರು ಮುಂದುವರಿಸಿದರು) ನಮ್ಮ ಕುಟುಂಬದವರ ಸ್ವಾಭಾವಿಕ ಮಧ್ಯಮ ಎತ್ತರದ ನಿಲವು–ಅಗಲವಾದ ಮುಖ. ಮುಖಕ್ಕೊಪ್ಪುವಂತ ಕಣ್ಣುಗಳು, ಮೂಗು, ಬಾಯಿಗಳನ್ನು ಹೊಂದಿದ್ದ. ಅವನೂ ಎದುರು ಮನೆಯ ಶಾಂತಲಾನೂ ಪರಸ್ಪರ ಆಕರ್ಷಕವಾದದ್ದು ಆಶ್ಚರ್ಯವಲ್ಲ. ಶಾಂತಾರಾಮ–ತನ್ನ ಬಿ.ಕಾಂ. ಕೊನೆಯ ವರ್ಷದಲ್ಲಿದ್ದ. ಶಾಂತಲಾ ಅದೇ ಕಾಲೇಜಿನಲ್ಲಿ ಬಿ ಎ. ಎರಡನೇ ವರ್ಷದಲ್ಲಿದ್ದಳು. ಶಾಂತಾರಾಮ–ತನ್ನ ಕ್ಲಾಸಿಗೆ ಒಂಭತ್ತನೇ ರ್‍ಯಾಂಕ್ ಪಡೆದಿದ್ದರೆ-ಶಾಂತಲಾ-ಅವಳ ಕ್ಲಾಸಿನಲ್ಲಿ ಹತ್ತನೇ ರ್‍ಯಾಂಕ್ ಪಡೆದಿದ್ದಳು. ಒಟ್ಟಿನಲ್ಲಿ ಶಾಂತಾರಾಮ–ಶಾಂತಲಾ ಇಬ್ರೂ–ನಿಮ್ಮ ಸಿಗರೇಟ್‌ನೋರು ಹೇಳೋ ಹಾಗೆ 'ಮೇಡ್ ಫಾರ್ ಈಚ್ ಅದರ್'-ಆಗಿದ್ದರು. ನಿಜ ಹೇಳೋದಾದ್ರೆ ಶಾಂತಾರಾಮ–ನಮ್ಮ ಕುಟುಂಬದವರ ಪರಂಪರೆಯಂತೆ-ಲವ್-ಎಟ್-ಫಸ್ಟ್‌ಸೈಟ್ ಮಾಡಿದ್ದ.

ಶಾಂತಾರಾಮ–ಶಾಂತಲಾರ ಪ್ರೇಮವನ್ನು ಮತ್ತೂ ಬಂಧಿಸಿದ್ದು ಅವರಿಬ್ಬರ ಚಕ್ರ ಬಂಧ ಸ್ಪರ್ಧೆ ಒಲುವು. ಮನಮೋಹಕ ಕುಶಲ ಕೈಕೆಲಸ–ಮೂರಕ್ಷರದ್ದು-ಕೊನೇ ಅಕ್ಷರ-ತಿ-ಏನು ಪದ ?-ಅಂತ ಶಾಂತಲಾ ಕೇಳಿದರೆ-'ಕಸೂತಿ' ಅಂತ ಶಾಂತಾರಾಮ ತಕ್ಷಣ ಹೇಳಿ ಬಿಡುವ. ಕುದುರೆಯೂ ಅಲ್ಲ-ಕತ್ತೆಯೂ ಅಲ್ಲ-ಐದಕ್ಷರ ಹೆಸರ್ಹೇಳಿ–ಅಂತ ಶಾಂತಾರಾಮ ತಡಕಾಡಿದರ-'ಹೇಸರಕತ್ತೆ' ಅಂತ ಒಂದು ಕ್ಷಣದಲ್ಲಿ ಶಾಂತಲಾ ಹೇಳುವಳು. ಆಶ್ಚರ್ಯದ ಸಂಗತಿ ಎಂದರೆ-ಚಕ್ರಬಂಧ ಬಿಡಿಸುವಾಗ ಶಾಂತಾರಾಮನಿಗೆ ಬಿಕ್ಕಲು ಮಾಯವಾಗಿ ಬಿಡುತ್ತಿತ್ತು. ಕನ್ನಡ ನಟಸಾರ್ವಭೌಮನ ಚಿತ್ರ ಮತ್ತು ಸ್ವಭಾವ –ಏಳಕ್ಷರ—ಮಧ್ಯದಲ್ಲಿ ದ—ನು—ಇವೆ –ಎಂದಕೂಡಲೇ 'ಬಂಗಾರದ ಮನುಷ್ಯ' ಅಂತ ಹೇಳಿಬಿಡುತ್ತಿದ್ದ. ಆದರೆ ಇತರೇ ಸಮಯದಲ್ಲಿ ಅವನ ಬಾಯಿಂದ 'ಬಂಗಾರದ ಮನುಷ್ಯ' ಅಂತ ಹೇಳಿಸಬೇಕಾಗಿ ಬಂದರೆ "ಬಂ ಒಂ..." ಅಂತ ಕೋಲಾರದ ಚಿನ್ನದ ಗಣಿಯೊಳಗೇ ಹೋಗಿ ಬಿಡುತ್ತಿದ್ದ. ಆದರೆ ತನ್ನ ಬಿಕ್ಕಲು ಹೋಗಲು ಸದಾ ಚಕ್ರ ಬಂಧದಲ್ಲೇ ಇರಲು ಸಾಧ್ಯವೆ?

ಶಾಂತರಾಮನಿಗೆ ತನ್ನ ಬಿಕ್ಕಲು ಬಗ್ಗೆ ಎಷ್ಟು ಆತಂಕವಿತ್ತೋ ಶಾಂತಲಾಗೂ ಆ ಬಗ್ಗೆ ಅಷ್ಟೇ ಆತಂಕವಿತ್ತು. ತಾವು ಕೇಳಿದ–ಓದಿದ ಪ್ರಯೋಗಗಳನ್ನೆಲ್ಲಾ

ನಡೆಸಿದರು. ಹಿಂದೆ ಪಾಣಿನಿಯೋ—ಸಿಸಿರೋನೋ ಸಮುದ್ರ ತೀರದಲ್ಲಿ ನಿಂತು ಸಾಧನೆ ಮಾಡಿದ ಹಾಗೇ ಶಾಂತರಾಮು ಪ್ರತಿನಿತ್ಯ ಬೆಳಗಿನ ಜಾವ ಕೆಂಪಾಂಬುದಿ ಕೆರೆ ದಡದಲ್ಲಿ ನಿಂತು ಸಣ್ಣ ಕಲ್ಲುಗಳ್ನು ಬಾಯಿಗೆ ಹಾಕಿಕೊಂಡು ಕಿರಿಚಿದ್ದು ಉಂಟು, ಶಾಂತಲಾ—ಶಾಂತರಾಮುನಿಗೆ ಸಿಸಿರೋಮುನ್ನಾ ಮಾಡಿದಳು ಅದೇ ಸಮಯಕ್ಕೆ ಒಂದು ಪತ್ರಿಕೇಲಿ ಬಿಕ್ಕಲು ಬಗ್ಗೆ ಒಂದು ಲೇಖನ ಬಂದಿತು. ಅದರ ಪ್ರಕಾರ ಬಿಕ್ಕಲನ್ನು ಗೆಲ್ಲಲು ಎರಡು ಮಾರ್ಗಗಳನ್ನು ಸೂಚಿಸಿದ್ದರು.

1) ಸಮಯ ಸಿಕ್ಕಿದಾಗಲೆಲ್ಲಾ ಪರಿಚಿತರೊಂದಿಗೋ ಅಪರಿಚಿತರೊಂದಿಗೋ ಮಾತನಾಡಲು ಶುರುಮಾಡಿ–ಸಂಕೋಚಪಡಬೇಡಿ.

2) ನೀವು ಹೇಳಬೇಕಾದ್ದನ್ನು ಹಾಡಿಹೇಳಿರಿ.

ಪ್ರಾಯಶಃ ಆ ಸಲಹೆಗಾರನಿಗೆ ಮೂರನೆಯ ಮಾರ್ಗ ಚಕ್ರಬಂಧ ಸ್ಪರ್ಧೆ ತಿಳಿದಿರಲಾರದು-ಇರಲಿ. ಶಾಂತಾರಾಮನಿಗೆ ಈ ಎರಡು ಉಪಾಯಗಳು ಸರಿ ಎನಿಸಿದವು. ಶಾಂತಲಾಗೆ ತಿಳಿಸದೇ ತನ್ನ ಕಾರ್ಯಸಾಧಿಸಲು ನಿರ್ಧರಿಸಿದ. ಒಂದು ಸಂಜೆ ತನ್ನ ಪ್ರಯೋಗ ನಡೆಸೋಕೆ ರೈಲ್ವೇಸ್ಟೇಷನ್ನಿಗೆ ಹೋದ. ಐವತ್ತು ಪೈಸೆ ಟಿಕೆಟ್‌ಕೊಂಡು ಒಳಗೆ ನುಗ್ಗಿದ್ದ. ಮೀಟರ್ ಗೇಜ್ ಪ್ಲಾಟ್ ಫಾರಂ ಕಡೆ ಅಷ್ಟು ಗುಜುಗುಜು ಇರಲಿಲ್ಲ. ಸುತ್ತ ನೋಡಿದ. ಒಬ್ಬಾತ ಒಂದು ಕರೀಬ್ಯಾಗ್ ಹಿಡಿದು ಕೊಂಡು ಅಲಗ್ಗಾಗಿ ನಿಂತಿದ್ದ. ನೋಡೋಕೆ ವಿದ್ಯಾವಂತ-ಸಂಭಾವಿತನಂತೆ ಕಂಡ. ಶಾಂತರಾಮು ಮುಗುಳ್ನಗೆ ಬೀರುತ್ತಾ ಆತನ ಕಡೆ ಬಂದ ಆತನೂ ಮುಗುಳ್ನಕ್ಕ. ಶಾಂತರಾಮು ಮಾತನಾಡಲು ತನ್ನ ನಾಲಿಗೆ ಸರಿಪಡಿಸಿಕೊಂಡ.

ಮೈ....ಮೈ....ಸ್ನೂ ಮೈ ಸ್ನೂ ಕ್ಷಿಲ್....ಎ....ಕ್ಷಮ್ ಕ್ಷಮ್ಸಿ... ಎ ಎ ಷ್ ಟ್ಷೇ....ಪ್ಲಾ ಪ್ಲಾ ಟ್...."

ಅಲ್ಲ ಇದು ಶುರುಮಾಡಿದ್ದು ಶಾಂತಾರಾಮನಲ್ಲ. ಆತ !

ಶಾಂತಾರಾಮನ ನಾಲಿಗೆ ಹಾಗೇ ಮುದುಡಿ ಕೊಂಡಿತು. ತಾನೂ ಅವನಿಗೆ "ಏ ಏ ಏಕ್ಷೇ....ಪ್ ಪ್...." ಅಂತಶುರುಮಾಡಿದರೆ ಮುಂದೇನಾಗಬಹುದೆಂದು ಯೋಚಿಸಲೂ ಭಯಪಟ್ಟ ಆತನಮುಖನೋಡಿ–ತನ್ನ ಬಾಯಿ ಅಗಲವಾಗಿ ತೆರೆದು–ತನಗೆ ಮಾತು ಬರೋದಿಲ್ಲಾಂತ ಹೆಬ್ಬೆಟ್ಟಲ್ಲಾಡಿಸಿದ.

"ಪ್-ಪ್-ಪ್ಪಾ-ಪ್ಪ....ಮು ಮ್ಯೂ....ಕ....ಕ್ಕ" ಆತ ಕನಿಕರ ಪಟ್ಟ.

ಸಂದರ್ಶನ ಮುಗೀತು. ಶಾಂತಾರಾಮು ಅಲ್ಲಿಂದ ಮೆಲ್ಲಗೆ ಕಾಲ್ತೆಗೆದ ಪ್ಲಾಟ್ ಫಾರಂ ಮೇಲೆ ಹಾಗೇ ಕಣ್ಣು ಹಾಯ್ಸಿದ ಒಂದುಕಡೆ ಒಬ್ಬಾತ ಕಂಬಕ್ಕೊರಗಿಕೊಂಡು

ಯಾರ ನಿರೀಕ್ಷೆಯಲ್ಲಿ ಇದ್ದವನಂತೆ ನಿಂತಿದ್ದ. ತನ್ನ ಕೈಲಿದ್ದ ಪತ್ರಿಕೆಯಿಂದ ಗಾಳಿಬೀಸಿ ಕೊಳ್ಳುತ್ತಿದ್ದ ಈತನೇ ಸೈ-ಅಂತ ಶಾಂತಾರಾಮು ತನ್ನ ಮುಗುಳ್ನಗೆ ಬೀರುತ್ತಾ

"ನ-ನ್-ನ್ನ-ಮಸ್ತೆ....ತ್-ತುಂಬ್-ಬಾ ಥ್ಯ-ಕಿ- ಅಂದ.

ಆತ ತನ್ನ ಬೀಸಣಿಗೆಯನ್ನು ನಿಲ್ಲಿಸಿ, ಶಾಂತಾರಾಮುನ್ನ ಆಪಾದ ಮಸ್ತಕನೋಡಿ

"ಹೌದ್ರೀ-ಈ ಶೆಟೀನ ನಾನೇ ಆರ್ಡರ್ ಮಾಡೀನ್ರೀ! ನಿಮಗೇನು ಹಿಡ್ಸಿಲಿಲ್ಲೇನು?"-ಅಂತಕೇಳಿದ.

ಶಾಂತಾರಾಮು ಬೆಚ್ಚಿ ಬೆವರಿದ.

"ನನ್ನ ತಲೀ ಕೆಡಿಸ್ಬ್ಯಾಡಿ ಹೋಂಡ್ರೀ ಇಲ್ಲಿಂದ!" ಅನ್ನುತ್ತಾ ತನ್ನ ಕೈಲಿದ್ದ ಪೇಪರ್ ಎತ್ತಿದ.

ಶಾಂತಾರಾಮು ಒಂದು ಕ್ಷಣವೂ ಅಲ್ಲಿ ನಿಲ್ಲದೆ ಓಡಿದ ಅದೇ ಸಮಯಕ್ಕೆ ಮೈಸೂರು ರೈಲು ಹೊರಟಿತ್ತು. ಶಾಂತಾರಾಮುನ ಬುದ್ಧಿಯೂ ಮಾಯವಾಗಿತ್ತು ಹಿಂದೂ ಮುಂದೂ ನೋಡದೆ ಹೊರಡುತ್ತಿದ್ದ ರೈಲಿನ ಒಂದು ಬೋಗಿಯೊಳಗೆ ನುಗ್ಗಿ ಒಂದು ಕಡೆ ಕುಳಿತು ಸುಧಾರಿಸಿ ಕೊಂಡ. ರೈಲು ಸಿಗ್ನಲ್ ದಾಟಿತು. ಬೋಗಿಯೊಳಗೆ ಕಣ್ಣು ಹಾಯಿಸಿದ. ತಾನು ಕೂತಿದ್ದ ಸೀಟಿನ ತುದಿಯಲ್ಲಿ ಒಂದು ವ್ಯಕ್ತಿ ಮಲಗಿತ್ತು. ಅದರ ಎದುರು ಸೀಟಿಯಲ್ಲಿ ಮತ್ತೊಂದು ಮಲಗಿತ್ತು. ಬೇರೆಯಾರ ಗಲಾಟೆಯೂ ಇರಲಿಲ್ಲ. ಶಾಂತರಾಮು ಆದಷ್ಟೂ ಮುದುಡಿಕೊಂಡು ಕುಳಿತ. ಯೋಚಿಸುವ ಸ್ಥಿತಿಯಲ್ಲಿರಲಿಲ್ಲ.

ಬೋಗಿಯ ಬಾತ್ ರೂಮ್ ತೆರೆದ ಶಬ್ದವಾಯ್ತು ಒಬ್ಬಾಕೆ ಬಂದಳು, ಶಾಂತಾರಾಮುನನ್ನು ನೋಡಿದಳು....

"ಲೇ ಅಕ್ಕಾ ಏಳೇ—ಯಾವ್ನೋ ಕದೀಮ ನುಗ್ಗವ್ನೆ! ಅಂತ ಕಿರುಚಿದಳು.

ಮತ್ತಿಬ್ಬರೂ ಎದ್ದರು—ಹೆಣ್ಣುಗಳು!

"ಯೆನ್ಲಾ ಯೆಂಗಸ್ರ ಡಬ್ಬ್ಯಾಗೆ ಹತ್ತಾಕೆ ನಿಂಗೆಷ್ಟು ಪೊಗರು?"—ಅನ್ನುತ್ತಾ ಎದ್ದು ನಿಂತ ಒಬ್ಬ ಧಡೂತಿ ಆಕೆ ಚಪ್ಪಲಿ ಹಿಡಿದು ಕೊಂಡಳು.

ಶಾಂತಾರಾಮು ಅರೆಜೀವವಾಗಿ ಬಿಟ್ಟ. ತನ್ನಬಿಕ್ಕಲನ್ನು ಶಪಿಸುತ್ತಾ-ತನ್ನ ಅವಸ್ಥೆಗೆ ನಾಚುತ್ತಾ ತನ್ನನ್ನು ಈ ಸ್ಥಿತಿಗೆ ತಂದ ಆ ಲೇಖಕನನ್ನು ಮನಸಾರ ಹಿಂಡುತ್ತಾ ಹಾಡಲು ಶುರುಮಾಡಿದ....

"ಅಮ್ಮಗಳಿರಾ ಅಕ್ಕಗಳಿರಾ

ರೈಲು ಡಬ್ಬಿಯ ತಾಯಿಗಳಿರಾ
ನಾನು ನಿಮ್ಮಾ ತಮ್ಮ ನಮ್ಮಾ
ಹೊಡೆಯ ಬೇಡರಿ ನನ್ನನೂ"

ಅಂತ ಹಾಡಿ ಕೈಮುಗಿದು ನಿಂತ.

ಆ ಹೆಂಗಸಿಗೆ ಪಾಪ–ಎನಿಸಿರಬೇಕು.

"ಲೇ–ತಲೀ ಸಮಾ ಇಲ್ಲಾಂತ ಕಾಣ್ತದೆ.......ಸುಮ್ನಿರಿ........ಅನ್ನುತ್ತಾ ಶಾಂತಾರಾಮನ ಕಡೆ ತಿರುಗಿ

''ನಾಯಂಡಳ್ಳೀ ಬರ್ತದೆ. ಸುಮ್ನೆ ಇಳಿದ್ಹೋಗು–ಇಲ್ದಿದ್ರೆ ಪೋಲೀಸ್ಗೆ ಕ್ಕೊಡ್ತೀವಿ''–ಅಂದಳು.

ನಾಯಂಡ್ಹಳ್ಳಿ ಸ್ಟೇಷನ್ ಬಂತು. ರೈಲಿನ್ನೂ ಪೂರ್ತಿ ನಿಲ್ಲುವುದಕ್ಕೆ ಮೊದಲೇ ಶಾಂತಾರಾಮ–ಬೋಗಿಯಿಂದ ಹಾರಿ ಅಲ್ಲಿಂದ ಪಲಾಯನ ಮಾಡಿದ. ಅವನ ಹಿಂದೆ ಯಾರೋ–''ಟಿಕೇಟ್'' ! ''ಟಿಕೇಟ್'' !–ಅಂತ ಕೂಗಿದ ಹಾಗಾಯ್ತು. ಶಾಂತಾರಾಮ ನಿಲ್ಲಲಿಲ್ಲ. ಸ್ಟೇಷನ್ ಬೇಲಿ ಹಾರಿ–ಹೊಲಗದ್ದೆಗಳನ್ನು ದಾಟಿ ಮೈಸೂರು ರೋಡಿಗೆ ಬಂದ. ನಿಲ್ಲಲಿಲ್ಲ ಓಡಿದ. ಎನ್.ಜಿ.ಇ.ಎಫ್ ಟೋರಿನೋ-ಬ್ಯಾಪ್ಕೋ–ಓಡುತ್ತಲೇ ದಾಟಿದ ನಿಲ್ಲಲಿಲ್ಲ. ಬ್ರಿಯಾಂಡ್ ಸರ್ಕಲ್ ಮುಟ್ಟಿದ. ನಿಲ್ಲಲಿಲ್ಲ. ಓಡಿದ. ರಾಯನ್ ಸರ್ಕಲ್‌ಗೆ ಬಂದು ಸೇರಿದ ಉಸಿರು ಸರಿಮಾಡಿ ಕೊಳ್ಳೋಕೆ ನಿಂತ. ಹಿಂತಿರುಗಿ ನೋಡಿದ. ಯಾರೂ ತನ್ನ ಬೆನ್ನು ಹತ್ತಿರಲಿಲ್ಲ. ಅಂದು ಶಾಂತಾರಾಮ ಓಡಿದ ಮಾರ್ಗದಲ್ಲೇ–ಅಂದರೆ ನಾಯಂಡ್ಹಳ್ಳಿ ರೈಲ್ವೆ ಸ್ಟೇಷನ್ನಿಂದ ರಾಯನ್ ಸರ್ಕಲ್‌ವರಿವಿಗ ಒಲಿಂಪಿಕ್ಸ್ ರನ್ನಿಂಗ್ ರೇಸಿಟ್ಟಿದ್ದಿದ್ದರೆ–ಕಾರ್ಲ್‌ಲೂಯಿಸ್ನೂ. ಡಾಲಿಥಾಮಸ್ನೂ, ಸೆಬೆಸ್ಟಿಯನ್ ಕೋನ್ನೂ-ಶಾಂತಾರಾಮ ಕೆಲವು ಫರ್ಲಾಂಗ್ ಅಂತರದಿಂದ ಸೋಲಿಸುತ್ತಿದ್ದ !

ಚಾಮರಾಜಪೇಟೆ ಐದನೇ ರಸ್ತೇಲಿ ಅವನ ಮನೆ ಸೇರೋ ಹೊತ್ಗೆ ರಾತ್ರಿ ಹನ್ನೊಂದು ಘಂಟೆ. ಮನೇಲಿ ಎಲ್ರೂ ಎದ್ದಿದ್ರು. ಶಾಂತಲಾ ಒಂದು ಚಕ್ರ ಬಂಧ ಕೈಲಿ ಹಿಡಿದು ಅಲ್ಲೇ ಕಾದಿದ್ಲು.

''ಇದೇನು ಶಾಂತ'–ಎಲ್ಲಿಂದ ಓಡಿಬರ್ತಿದ್ದಿ ? ಇದನ್ನ ಹೇಳು–'ಎಚ್ಚರಿಕೆ ! ಓಡಿದರೆ ಸಿಡಿಲು ಬಡಿದೀತು !–ಐದಕ್ಷರದ ಪದ–ಮಧ್ಯೆ–ನ–"ಶಾಂತಲಾ ಶುರು ಮಾಡಿದಳು.

"ಅಯ್ಯೋ–ಮಿಂಚಿನ ಓಟ-ಶಾಂತಾ ! ಅದೇ ನಾನೀಗ ಮಾಡ್ತಾ ಬಂದಿದ್ದು. ಪುನಃ ನಿನ್ನ ಹಾಳು ಕ್ರಾಸ್‌ವರ್ಡ್ ನನ್ನ ಮುಂದೆ ತರಬೇಡ. ಮಿಂಚಿನ ಓಟ ! ಹ ಹ್ಹ ಹ್ಹಾ ಶಾಂತಲಾ !" ಶಾಂತಾರಾಮ ಕಿರುಚಿಕೊಂಡ.

ಎಲ್ಲರೂ ಬೆಚ್ಚಿದರು.

"ಏನು ಆಯಿತು !" ಶಾಂತಲಾ ಗಾಬರಿಯಿಂದ ಕೇಳಿದಳು.

"ನನ್ನ ಮಾತು ಕೇಳ್ತಿದ್ದೀಯಾ ಶಾಂತಾ ? ಬಿಕ್ಕಲು ಇಲ್ವೇ ಇಲ್ಲ–ಬಿಕ್ಲೇ ಇಲ್ಲ....ಬಿಕ್ಲು ಸುತರಾಂ ಇಲ್ಲ–ಬಿಕ್ಲು ಹೊರಟ್ಹೋಯ್ತು...."

ಶಾಂತಾರಾಮ ಈ ಮಾತನ್ನು ಇಪ್ಪತ್ತೇಳು ಬಾರಿ ಹೇಳಿ ಸುಸ್ತಾಗಿ ನಿಂತ.

ಮಲ್ಹಾರಿರಾಯರು ತಮ್ಮ ಅಣ್ಣನ ಮಗ ಶಾಂತಾರಾಮನ ಈ ಅದ್ಭುತ ಅನುಭವನ್ನು ಹೇಳಿ ಮುಗಿಸಿ.

"ಶಾಂತಾರಾಮನಿಗೆ ಬಿಕ್ಕಲು ಪೂರ್ತಿ ವಾಸಿಯಾಯ್ತು. ಈಗ ಶಾಂತಾರಾಮ-ಶಾಂತಲಾ ಬಾಂಬೇಲಿ ಸುಖವಾಗಿ ಸಂಸಾರ ಮಾಡಿಕೊಂಡಿದ್ದಾರೆ." ಅಂದರು.

"ಮತ್ತೆ ಚಕ್ರಬಂಧ ಸ್ಪರ್ಧೇಲಿ ಭಾಗವಹಿಸಿದ್ದಾರೋ !" ಚೌ ಚೌ ಕೇಳಿದರು.

"ಶಾಂತಾರಾಮನ ಬಿಡುವು ಸಮಯದಲ್ಲೆಲ್ಲಾ ಅದೇ ಅವರ ಕೆಲ್ಸ. ಇತ್ತೀಚೆಗೆ ಮೂರು ಸಾವಿರ ರೂಪಾಯಿ ಮೊದಲ ಬಹುಮಾನ ಕೂಡಬಂತು." ಅಂದರು.

"ತುಂಬಾ ಆಶ್ಚರ್ಯ" ಅಂದರು ಬಾಳೇಕಾಯಿ ಬಜಿ.

"ನಿಮ್ಮ ತಲೀಗೆ ರಾಯರು ಹೇಳಿದ ಕಥೆ ಅರ್ಥವಾದದ್ದು ಮತ್ತೂ ಆಗ್ಲೀ ಆಶ್ಚರ್ಯ !" ಅಂದರು ಓಂಪುಡಿ.


ಚಿನ್ನದ ಲೂಟಿ

ಮರುಭೂಮಿಯಲ್ಲಿ
ಮೊಂಡಗಳ್ಳಿಯೇ ಆಲದಮರ
ನೇಪಾಳದ ಈಜುಕೊಳದಲ್ಲಿ
ನಮ್ಮದೇ ಮತ್ಸ್ಯಾವತಾರ
ಯಾರಿಲ್ಲ ದೂರಿಲ್ಲಿ
ಮೂಳಪ್ಪನೇ ಮುತ್ತೈದೆ !


.... ಗೆ

ಕಂಕುಳಲಿ ಕತ್ತೆ ಭಾರದ ಪುಸ್ತಕದ ಕಂತೆ
ಇರುಕಿ ನೀ ನೊಂಟಿ ಕಾಲಲಿ ಏಕೆ ನಿಂತೆ ?
ಹಳ್ಳತಿಟ್ಟಿನ ದಾರಿಯಲ್ಲಿ ಕುಣಿದಿದೆ ಬಸ್ಸು
ನಿನ್ನೆದೆಯ ತಾಳಕ್ಕೆ ಮನದಿ ಮ್ಯಾಡ್ನೆಸ್ಸು.

—ಸೋಮಿ



“ ಲಕ್ಷ್ಮೀೀೀೀೀೀ........ ”



ಶುಭಾಶಯಗಳೊಂದಿಗೆ :—

ಸ್ಕೈಲಾರ್ಕ್ ಆ್ಯಕ್ಸಸರೀಸ್ ಕಾರ್ಪೊರೇಷನ್

ಎ–118, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್,

ಬೆಂಗಳೂರು–560 058.

☆☆☆☆

ಕ್ಯೂ ರಾಣಿ

—ಲೀಲಾ ಮಿರ್ಜಿ

"ತುಂಬಾ ಒಳ್ಳೆ ಅಕ್ಕಿ ಬಂದಿದೆ ಡಿಪ್ಪೋಲಿ, ಈಗ ತಾನೆ ಮೂಟೆ ಬಿಚ್ಚಿದಾರೆ. ಬೇಗಾ ಹೋಗಿ ತಗೊಳಿ" ಅಂದರು ನಮ್ಮ ನೆರೆಮನೆಯಾಕೆ.

ಸರಿ, ಇದ್ದ ಕೆಲಸವನ್ನೆಲ್ಲಾ ಬಿಟ್ಟು, ಕಾರ್ಡು, ಬ್ಯಾಗು ಹಿಡಿದು ರೇಶನ್ ಅಂಗಡಿಗೆ ಓಡಿದೆ. ಕ್ಯೂ ಪೂರಾ ಇತ್ತು. ಹೋಗಿ ಕ್ಯೂನಲ್ಲಿ ನಿಂತೆ. ನನ್ನ ಸರದಿ ಬರಲು ಇನ್ನೊಂದು ಗಂಟೆಗೆ ಮೋಸವಿರಲಿಲ್ಲ. ಹಿಂದೆ ಇಷ್ಟು ದೊಡ್ಡ ಕ್ಯೂ ನೋಡಿದರೆ ನನಗೆ ತಲೆನೋವು ಶುರುವಾಗಿ ಬಿಡುತ್ತಿತ್ತು. ಈಚೀಚೆಗೆ ಅನುಭವ ದಿಂದ ಕ್ಯೂ ಕಾಯುವ ಕಲೆಯನ್ನು ಕಲಿತಿದ್ದೇನೆ. ಇದರ ಫಾರ್ಮ್ಯುಲಾ ಇಷ್ಟೆ ! (1) ಮುಂದೆ ಎಷ್ಟು ಜನರಿದ್ದಾರೆ ಎಂದು ಎಣಿಸಬಾರದು. (2) 'ಬಿಲ್ ಬರೆಯುವವನು ಏಕಿಷ್ಟು ಸಾವಧಾನವಾಗಿ ಬರೀತಾನೆ ಬೇಗ ಬರೆಯಬಾರದೇ', ಎನ್ನುವ ಯೋಚನೆ ತಲೆಯೊಳಗೆ ಬರಬಾರದು. (3) ನಾವು ಬಂದಿರುವುದು ಅಕ್ಕಿ, ಸಕ್ಕರೆ, ಇತ್ಯಾದಿಗಳನ್ನು ಕೊಳ್ಳಲು, ಎನ್ನುವುದನ್ನು ಮರೆಯಬೇಕು ಅಥವಾ ಅದು ಸೆಕೆಂಡರಿ ಎಂದು ಭಾವಿಸಬೇಕು. (4) ದೇವರಿಗೆ ನಮ್ಮ ಮೇಲಿನ ಪ್ರೀತಿ ಜಾಸ್ತಿಯಾಗಿ, ನಮಗೆ ಎಂಟರ್‌ಟೇನ್‌ಮೆಂಟ್ ಒದಗಿಸಲು ಇಲ್ಲಿಗೆ ಬರಮಾಡಿಕೊಂಡಿದ್ದಾನೆ, ಎಂಬ ನಂಬಿಕೆಯನ್ನು ಇಡಬೇಕು. (5) ಈ ನಂಬಿಕೆ ನಿಜವಾಗಬೇಕಾದರೆ ಸುತ್ತಮುತ್ತಲೂ ನಡೆಯುತ್ತಿರುವುದನ್ನು ಶಾಂತ ಮನಸ್ಸಿನಿಂದ ವೀಕ್ಷಿಸಬೇಕು. ಈ ಮೇಲ್ಕಂಡ ಪಾಯಿಂಟುಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಕ್ಯೂನಲ್ಲಿ ನಿಂತರೆ ಅರ್ಧ ಕಿ.ಮಿ. ಕ್ಯೂ ಅರ್ಧ ನಿಮಿಷದಲ್ಲಿ ಕರಗಿದಹಾಗೆ ಅನ್ನಿಸುತ್ತೆ.

ಈ ನನ್ನ ಮೇಲ್ಕಂಡ ಫಾರ್ಮ್ಯುಲಾದ ಐದನೆಯ ಪಾಯಿಂಟ್ ಪ್ರಕಾರ ನನ್ನ ಮುಂದಿದ್ದ ಕ್ಯೂ ಬಾಂಧವರ ಮೇಲೆ ದೃಷ್ಟಿ ಹಾಯಿಸಿದೆ. ಹೆಂಗಸರ ಪೈಕಿ ಅಲ್ಲಿದ್ದ ವರೆಲ್ಲಾ ನನ್ನ ತರಹದವರೇ. 'ರೇಶನ್ ಅಂಗಡಿಗೆ ತಾನೆ' ಎಂದು, ಯಾವುದೊ ಮುದುರಿದ ಸೀರೆ, ಮಾಸಿದ ರವಿಕೆ, ಮುಖಕ್ಕೊಂದಿಷ್ಟು ಬೂದಿ ಬಳಿದುಕೊಂಡು ಓಡಿ ಬಂದವರೇ, ನಮ್ಮಗಳ ಮಧ್ಯೆ ಎತ್ತಿಕಾಣುವಂತೆ ಇದ್ದಳು ನನ್ನ ಮುಂದೆ ನಿಂತಿದ್ದ ಹುಡುಗಿ, ಸುಮಾರು ಇಪ್ಪತ್ತೆರಡೊ ಇಪ್ಪತ್‌ಮೂರೊ ವರ್ಷವಿರಬೇಕು. ಕವಿಗಳು ವರ್ಣಿಸುವ ಹಾಗೆ ಸಂಪಿಗೆ, ತೊಂಡೆಕಾಯಿ, ಕಮಲದ ಹೂ, ಮೀನು ಇವುಗಳನ್ನು ಹೋಲುವ ಕಣ್ಣು, ಮೂಗು, ಬಾಯಿ ಇತ್ಯಾದಿಗಳು. ಈಗಿನ ಕಾಲದ

ಕನ್ಯೆ, ಚೂಡೀದಾರ್ ಕಮೀಜ್ ತೊಟ್ಟು, ಜುಟ್ಟನ್ನು ಅಂದವಾದ 'ಫ್ರೆಂಚ್‌ನಾಟ್' ನಲ್ಲಿ ಸುತ್ತಿದ್ದಳು. ಕಣ್ಣು ತುಂಬಾ ನೋಡುವ ಹಾಗಿದ್ದಳು. ನಮ್ಮ ಕ್ಯೂವಿನ ರಾಣಿ.

ಪಕ್ಕದಲ್ಲೇ ಎಣ್ಣೆ ಕ್ಯೂ. ಅದೂ ದೊಡ್ಡದಾಗಿತ್ತು. ಅದರಿಂದಾಂಚೆಗೆ ತರಕಾರಿ ಅಂಗಡಿಯ ರಶ್ ಬೇರೆ.

ಆ ಜನಜಂಗುಳಿಯ ಮಧ್ಯೆ ಬಂತು ಒಂದು ಮೇಲು ದನಿ, ಗಂಡಸಿನ ಧ್ವನಿ.

"ಶೋಭಾ"


ನಮ್ಮ ಕ್ಯೂ ರಾಣಿ ಧ್ವನಿ ಬಂದ ಕಡೆ ನೋಡಿದಳು. ಆದರೆ ಆವಳಿಗೆ ಧ್ವನಿಯ ಸೋರ್ಸ್ ಕಾಣಲಿಲ್ಲ, ನನಗೆ ಕಂಡ ಆ ಮಹಾನುಭಾವ. ಈಗಿನ ಕಾಲದ ರೋಮಿಯೊ. ಜೀನ್ಸ್, ಟೀ ಶರ್ಟ್ ತೊಟ್ಟು, ಸರ ಬಳೆ ಹಾಕಿಕೊಡು ನಿಂತಿದ್ದಾನೆ, ಮರಿ ಅಮಿತಾಬಚ್ಚನ್, ಕ್ಯೂ ದಾಟಿ ಬರಲು ಅವನಿಗೆ ತೊಂದರೆ ಇತ್ತು. ಇನ್ನೊಮ್ಮೆ ಪಿಸುದನಿಯಲ್ಲಿ ಕೂಗಿದ, ಅವಳಿಗೆ ಆವನು ಕಾಣಿಸಲಿಲ್ಲ. ಧ್ವನಿ ಕೇಳಿ ಮುಖ ಕೆಂಪೇರಿತು. ಸುತ್ತಾ ತಿರುಗಿ ನೋಡಿದಳು.

ಇದೇ ಇವತ್ತಿನ ಎಂಟರ್‌ಟೇನ್‌ಮೆಂಟ್ ಎಂದುಕೊಂಡು ಭದ್ರವಾಗಿ ನಿಂತೆ. ಕಥೆ ಸ್ಪಷ್ಟವಾಯಿತು. ಇಷ್ಟು ಲಕ್ಷಣವಾಗಿರೊ ಹುಡುಗೀನ ಕ್ಯೂ ಕಾಯಲು ಕಳಿಸಿರುವ ತಂದೆ ತಾಯಿಗಳನ್ನು ಮನಸ್ಸಿನಲ್ಲೇ ನಿಂದಿಸಿದೆ. ಅಥವ ಮನೆಯವರಿಗೆ ಗೊತ್ತಿಲ್ಲದೆ, ಇವಳೇ ರೇಶನ್ ತರುವ ನೆವಮಾಡಿ, ರೋಮಿಯೋನ ಮೀಟ್ ಮಾಡಲು ಬಂದಿದ್ದಾಳೊ ತಿಳಿಯಲಿಲ್ಲ. ಇಂಥಾ ದೊಂಬಿಗಳಲ್ಲಿ ನಿಲ್ಲಲು ನಮ್ಮಂಥಾವರೇ ಸರಿ. ನಮ್ಮ ಭೂತಾಕಾರಗಳನ್ನು ನೋಡಿ, ಕ್ಯೂನಲ್ಲಿ ನಿಂತವರೂ ಹೆದರಿ ಓಡುತ್ತಾರೆ. ಒಟ್ಟಿನಲ್ಲಿ ಮನೆಯವರಿಗೆ ಬುದ್ಧಿ ಇಲ್ಲಾ. ಇಂಥಾ ಎಳೇ ಹುಡುಗಿಯರನ್ನ ಕಳಿಸಿದರೆ ರಸ್ತೆ ರೋಮಿಯೋಗಳು ಸುಮ್ಮನಿರುತ್ತಾರೆಯೇ ?

ನನ್ನ ಮನಸ್ಸಿನಲ್ಲಿ ಕೋಪ, ತಾಪ, ಸಂತಾಪ ಇತ್ಯಾದಿ ಎಲ್ಲಾ ಭಾವಗಳೂ ಒಮ್ಮೆಲೆ ಉಕ್ಕುತ್ತಿದ್ದಾಗ, ಧೈರ್ಯಮಾಡಿ ನಮ್ಮ ಮರಿ ಬಚ್ಚನ್ ಕ್ಯೂ ದಾಟಿಕೊಂಡು, ಅವಳ ಹತ್ತಿರವೇ ಬಂದು ನಿಂತ. ಆ ಹುಡುಗಿಗಾದರೋ ಅಷ್ಟು ಜನರೆದುರಿಗೆ ಸ್ವಲ್ಪವಾದರೂ ಸಂಕೋಚವಾಗಬೇಕಲ್ಲಾ. ದಿಟ್ಟತನದಿಂದ ನಿಂತಿದ್ದಳು. ಪ್ರಶ್ನಾರ್ಥಕ ಮುಖ ಮಾಡಿಕೊಂಡು.

“ಶೋಭಾ, ನೀನು ಕಾರ್ಡು ಮರೆತು ಬಂದಿದ್ದೆ ತಗೊ. ನಾನ್ ಸ್ವಲ್ಪ ಹೊರಗ್ ಹೋಗ್‌ಬೇಕು, ಮಗೂನ ಪಕ್ಕದ್ ಮನೇಲಿ ಬಿಟ್ಟಿದ್ದೀನಿ” ಅಂತ ಹೇಳಿ ಕಾರ್ಡ್‌ನ ಅವಳ ಕೈಗೆ ಕೊಟ್ಟು, ವಾಪಸ್ಸ್ ಹೊರಟ ಶೋಭಳ ಗಂಡ.

ನನ್ನಂಥ ಕೊಂಗು ಬುದ್ಧಿಗಳಿಂದಲೇ ನಮ್ಮ ಭೂಲೋಕ ಹೀಗೆ ಸೊಟ್ಟಗೆ ಕಾಣ್ತಿರೋದು ಅನ್ನೋದು ಆಗ ಅರ್ಥವಾಯಿತು. ನನ್ನ ಸರದಿ ಬರೋ ತನಕ, ಸಂತಾಪ ಸೂಚಕವಾಗಿ ಮೌನ ಆಚರಿಸಿದೆ.



“ ದೂರದರ್ಶನದಲ್ಲಿ ಅವಳ ಸ್ಟಿಲ್ ಬಂದಾಗಿನಿಂದ
ಅವಳು ಹೀಗೆ ಕಣೋ ! ”

ಇದನ್ನು ಕೇಳಿದ್ದೀರಾ........

ಸದಾ ಪುಸ್ತಕ ಹಿಡಿದು ಕೂತಿರುತ್ತಿದ್ದ ಪ್ರೊಫೆಸರನ್ನು ಉದ್ದೇಶಿಸಿ, ಆತನ ಹೆಂಡತಿ ಬೇಸರದಿಂದ "ನಾನು ಒಂದು ಪುಸ್ತಕವಾದರೂ ಆಗ ಬೇಕಾಗಿತ್ತು. ಆಗಲಾದರೂ ನೀವು ನನ್ನನ್ನು ಗಮನಿಸುತ್ತಿದ್ದಿರೇನೋ" ಅಂತ ಆಕ್ಷೇಪಿಸಿದರೆ, ಆತ "ಇಲ್ಲಾ, ನೀನು ಪಂಚಾಂಗವಾಗ ಬೇಕಾಗಿತ್ತು. ಆಗ ವರ್ಷಕ್ಕೊಮ್ಮೆ ಬದಲಿಸ ಬಹುದಿತ್ತು" ಅನ್ನೋಣವೇ !

○ ○ ○ ○ ○

ಅಮೇರಿಕಾದ ಪ್ರಸಿದ್ಧ ಹಾಸ್ಯ ಸಾಹಿತಿ ಮಾರ್ಕ್‌ಟ್ವೈನ್ ಪ್ರಾಮಾಣಿಕತೆಯ ಬಗ್ಗೆ ಮಾತನಾಡುತ್ತಾ, ಈ ಘಟನೆಯನ್ನು ಜ್ಞಾಪಿಸಿಕೊಂಡನಂತೆ.

"ಎಂಟು ವರುಷದ ಹುಡುಗನಾಗಿದ್ದಾಗ ಒಮ್ಮೆ ಕೈ ಗಾಡಿಯಲ್ಲಿ ಸೇಬಿನ ಹಣ್ಣನ್ನು ಎಳೆದುಕೊಂಡು ಹೋಗುತ್ತಿದ್ದುದನ್ನು ನೋಡಿದೆ. ಮೆಲ್ಲನೆ ಗಾಡಿಯಿಂದ ಒಂದು ಹಣ್ಣನ್ನು ಹಾರಿಸಿಕೊಂಡು ಬಂದೆ. ಮರದ ಕೆಳಗೆ ನಿಂತು, ಇನ್ನೇನು ಹಣ್ಣನ್ನು ಕಚ್ಚಿ ತಿನ್ನಬೇಕು, ಅಷ್ಟರಲ್ಲಿ ನಾನು ಮಾಡಿದ ತಪ್ಪು ಅರಿವಾಯಿತು. ಓಡಿ ಹೋಗಿ ಗಾಡಿಯಲ್ಲಿ ಆ ಹಣ್ಣನ್ನು ವಾಪಸ್ಸಿಟ್ಟು, ಕೊಳೆತ ಸೇಬಿನ ಬದಲು ಚೆನ್ನಾಗಿರುವ ಬೇರೊಂದನ್ನು ಎಗರಿಸಿ ತಂದೆ !!"

○ ○ ○ ○ ○

ವಿಶ್ವನಾಥರಾಯರಿಗೆ ಪುಣೆಯಿಂದ ಬೆಂಗಳೂರಿಗೆ ವರ್ಗವಾಯಿತು. ಕುದುರೆಯ ಮೇಲೆ ಕುಳಿತಿರುವ ಶಿವಾಜಿಯ ಪ್ರತಿಮೆಯನ್ನು ಕಂಡರೆ, ಅವರ ಚಿಕ್ಕಮಗ ಉಮೇಶನಿಗೆ ಬಲು ಪ್ರೀತಿ. ಊರನ್ನು ಬಿಡುವ ಮೊದಲು ಕಡೇ ಬಾರಿ ಆ ಪ್ರತಿಮೆಯನ್ನು ನೋಡಬೇಕೆಂದು ಆಸೆ ಪಟ್ಟ ಉಮೇಶನನ್ನು ತಂದೆ ಅಲ್ಲಿಗೆ ಕರೆದುಕೊಂಡು ಹೋದರು. ಪ್ರತಿಮೆಯನ್ನು ಕಣ್ಣು ತುಂಬಾ ನೋಡಿ 'ಟಾ ಟಾ ಶಿವಾಜಿ' ಎಂದು "ಅಪ್ಪಾ, ಶಿವಾಜಿಯ ಮೇಲೆ ಕೂತಿರುವವನು ಯಾರು ?" ಎಂದನಂತೆ ಉಮೇಶ !

ವಿದ್ಯಾರ್ಥಿಗಳು ಮೇಷ್ಟ್ರನ್ನು ಹೊಡೆಯಬಹುದೆ?

—ಎಂ. ಎಸ್. ಕೆ.

ಮೊನ್ನೆ ನಮ್ಮೂರಿನ ಸ್ಕೂಲೊಂದರಲ್ಲಿ ಒಬ್ಬ ಉಪಾಧ್ಯಾಯರೊಬ್ಬರನ್ನು ವಿದ್ಯಾರ್ಥಿಗಳು ಚೆನ್ನಾಗಿ ಥಳಿಸಿದರಂತೆ. ತರಗತಿಯಲ್ಲಿ ಪಾಠ ಮಾಡುತ್ತಿದ್ದಾಗ ಪಕ್ಕದ ಕೋಣೆಯಲ್ಲಿದ್ದ ವಿದ್ಯಾರ್ಥಿಗಳು ವಿಪರೀತ ಗಲಭೆ ಮಾಡಿ ತನ್ನ ಪಾಠ ಕೇಳುತ್ತಿದ್ದ ಜ್ಞಾನಪಿಪಾಸು ವಿದ್ಯಾರ್ಥಿಗಳಿಗೆ ತೊಂದರೆಯಾಗಿ, ಗದ್ದಲ ಮಾಡಬೇಡಿರೆಂದು ಅವರಿಗೆ ಹೇಳಿದಾಗ ಉದ್ರಿಕ್ತರಾದ ಪಕ್ಕದ ಕೋಣೆಯ ವಿದ್ಯಾರ್ಥಿಗಳು ತಮಗೆ ಸಂಬಂಧ ಪಡದ ಮೇಷ್ಟ್ರ ಅಸಹನೆಯನ್ನು ಪ್ರತಿಭಟಿಸಿ ಅವರಿಗೊಂದು ಪಾಠ ಕಲಿಸಬೇಂದು ತೀರ್ಮಾನಿಸಿ ಅವರನ್ನು ಥಳಿಸಿದರೆಂದು ವರದಿಯಾಗಿದೆ. ಇಲ್ಲಿ ಮೂಲಭೂತ ಸಮಸ್ಯೆಯ ಸ್ವರೂಪವೊಂದನ್ನು ಕಾಣಬಹುದು. ಮೇಷ್ಟ್ರನ್ನು ವಿದ್ಯಾರ್ಥಿಗಳು ಹೊಡೆಯಬಹುದೆ? ಈ ಪ್ರಶ್ನೆಗೆ ಹಲವಾರು ಮುಖಗಳಿರಬಹುದು. ಪ್ರಮುಖವಾಗಿ ತಾತ್ವಿಕ, ಕಾನೂನು, ಸಾಂಸ್ಕೃತಿಕ, ರಾಜಕೀಯ ಹಾಗೂ. ನೈತಿಕ ಮುಖಗಳನ್ನು ಸ್ಥೂಲವಾಗಿ ಪರಿಶೀಲಿಸಬಹುದು. ತಾತ್ವಿಕವಾಗಿ ನೋಡೋಣ. ಮೇಷ್ಟ್ರನ್ನು ಯಾರು ಎಂದೂ ಹೊಡೆಯುವುದೇ ಇಲ್ಲವೇ? ಒಡ ಮೇಷ್ಟ್ರ ಹೊಟ್ಟೆಯ ಮೇಲೆ ಹೊಡೆಯಬೇಡ ಎಂದು ಅವರು. ವರ್ಗವಾದಗಲೇ, ಯಾವುದೇ ಕಾರಣಕ್ಕೆ ಇಂಕ್ರಿಮೆಂಟ್ ಕಟ್ ಆದಾಗಲೇ ಹೆಂಡತಿ ಆಸ್ಪತ್ರೆಯಲ್ಲಿದ್ದಾಗ ರಜ ಮಂಜೂರು ಆಗದೆ ಇದ್ದಾಗಲೇ ಆರ್ತನಾದ ಮಾಡುವುದನ್ನು ಯಾರು ಕೇಳೇ ಇಲ್ಲವ? ಅವರ ಗೃಹಕೃತ್ಯದಲ್ಲಿ ಗಂಡ ಹೆಂಡತಿಯನ್ನು ಹೊಡೆಯುವ ಪದ್ಧತಿ ಇದೆಯೋ ಅಥವಾ ಹೆಂಡತಿ ಗಂಡನನ್ನು ಹೊಡೆಯುವ ಸಂಪ್ರದಾಯ ಇದೆಯೋ ಇಲ್ಲಿ ಚರ್ಚಿಸಲಗತ್ಯವಿಲ್ಲ. ಇನ್ನು ಕಾನೂನಿನ ಪ್ರಶ್ನೆ. ಇದು ಏನಾದಾಗಲೂ ಸ್ವಲ್ಪ ತೊಡಕೇ. ಪರಂಪರಾಗತವಾಗಿ ವಿದ್ಯಾರ್ಥಿಗಳನ್ನು ಮೇಷ್ಟ್ರು ಹೊಡೆಯುತ್ತಲೇ ಬಂದಿದ್ದಾರೆ. ಈಗ ಎಚ್ಚೆತ್ತ ಶಿಷ್ಯವೃಂದ ಸಾವಿರಾರು ವರ್ಷಗಳಿಂದ ತಮ್ಮ ಮೇಲಾಗುತ್ತಿರುವ ಅವೈಜ್ಞಾನಿಕ ದುರಾಡಳಿತವನ್ನು ಸ್ವಲ್ಪಮಟ್ಟಿಗಾದರೂ ಪ್ರತಿಭಟಿಸಿ ಒಂದು ಸಾಮಾಜಿಕ ಅವ್ಯವಸ್ಥೆಯನ್ನು ತಿದ್ದಲು, ಸಾರ್ವಜನಿಕರ ಗಮನವನ್ನು ಇತ್ತ ಹರಿಸಲು ಪ್ರಯತ್ನಿಸುವುದು ಅಪರಾಧವೆ? ಕಣ್ಣಿಗೊಂದು ಕಣ್ಣು, ಏಟಿಗೊಂದು ಇದರೇಟು ಎನ್ನುವ ನೈಸರ್ಗಿಕ ನ್ಯಾಯ ಪದ್ಧತಿಗೆ ಬಹುಮತದ ಅನುಮೋದನೆ ದೊರೆಯುವ ದಿನಗಳು ಇನ್ನೂ ದೂರವಿರಬೇಕೆ? ಗದ್ದಲ ಮಾಡುವುದು

ವಿದ್ಯಾರ್ಥಿಗಳ ಹಕ್ಕಲ್ಲವೆ? ಆ ಗೆಷ್ಟಲದಲ್ಲೇ ಅಲ್ಲವೆ ಅವರ ಸುಪ್ತ ಪ್ರತಿಭೆಗಳು ಜಾಗ್ರತಗೊಂಡು ಬೆಳಕು ಕಾಣುವುದು? ಸುಪ್ತ ಪ್ರತಿಭೆಯನ್ನು ಹತ್ತಿಕ್ಕುವುದು ಶೈಕ್ಷಣಿಕ ಸೂತ್ರಗಳಿಗೆ ಅಪಚಾರ ವೆಸಗಿದಂತೆ ಆಗವುದಿಲ್ಲವೇ? ಸಾಂಸ್ಕೃತಿಕವಾಗಿ ಮೇಷ್ಟರಿಗೆ ಅನುಕೂಲವೆಂದು ತೋರಬಹುದಾದ ಕೆಲವು ಜಿಡ್ಡುವಾದಗಳನ್ನು ಮಂಡಿಸಬಹುದು ಪರಂಪರಾಗತವಾಗಿ ಬಂದ ಮೇಷ್ಟರ ಒಂದು ಸ್ಥಿರ ಚಿತ್ರ. ನಮ್ಮ ಸಮಾಜದ ಕಣ್ಣ ಮುಂದಿದೆ. ಹರಕು ಪಂಚೆ, ಕೋಟು, ಕೆಲವೊಮ್ಮೆ ಪೇಟ. ಕೈಯಲ್ಲೊಂದು ಬೆತ್ತ, ಮೂಗಿನ ತುದಿಯಲ್ಲಿ ಕೂತ ಕನ್ನಡಕ ಇದೇ ಚಿತ್ರವನ್ನು ಕತೆಗಾರರು, ಕಾದಂಬರಿಕಾರರು, ವ್ಯಂಗ್ಯ ಚಿತ್ರಕಾರರು ಪರಿಪೋಷಿಸುತ್ತಾ ಬಂದಿದ್ದಾರೆ. ಪುಸ್ತಕ, ಬೋರ್ಡ್, ಸೀಮೆಸುಣ್ಣ, ನಕ್ಷೆಗಳ ಜೊತೆಗೆ ಶೈಕ್ಷಣಿಕ ಸಾಧನವಾಗಿ ಚಿತ್ರವನ್ನು ಮೇಷ್ಟರು ಬಳಸಬಹುದೇ ಎಂಬ ಪ್ರಶ್ನೆ ಇತ್ತೀಚಿನದಲ್ಲ. ಅಲ್ಲೊಮ್ಮೆ ಇಲ್ಲೊಮ್ಮೆ ಬೆತ್ತದ ಶ್ರೀಮಂತಬಳಕೆಯಾದಾಗ ಶಿಕ್ಷಣ ವೇತ್ತರು, ಪಾಲಕರು, ಸಾರ್ವಜನಿಕರು ಹುಬ್ಬೇರಿಸಿ ಖಂಡಿಸಿದ್ದಾರೆ. ಬೆತ್ತವನ್ನು ಬಳಸಕೂಡದು ಎಂದು ಹಲವಾರು ಅಹಿಂಸಾವಾದಿಗಳು ಆಗ್ರಹ ಮಾಡಿದಾಗ ನಮ್ಮ ಹಳೇಕಾಲದ ಮೇಷ್ಟರೊಬ್ಬರು.

> ಬೆತ್ತವಿಲ್ಲದ ಮಾಸ್ತರು। ವಿತ್ತವಿಲ್ಲದ ಬ್ಯಾಂಕು
> ಮತ್ತುತಾರದ ಮಧ್ಯ। ಕಿತ್ತು ಹೋಗುವ ಗೂಟ
> ಥತ್ತೇರಿ ಎನಿಸಿ ಕಾಡುವುವು ಸರ್ವಜ್ಞ॥

ಎಂದು ಆಶುಕವಿತೆ ಹೊಸೆದು ಸರ್ವಜ್ಞನನ್ನು ನಾಚಿಕೆಗೇಡಿಗೆ ಈಡು ಮಾಡಿದ್ದು ನೆನವಾಗುತ್ತದೆ.

'ನಮ್ಮ ಹುಡುಗನಿಗೆ ನಾಲ್ಕು ಬಾರಿಸಿ ಚೆನ್ನಾಗಿ ಬುದ್ಧಿ ಹೇಳಿ ಮೇಷ್ಟರೇ' ಎಂದು ನಿರ್ದಯೆಯಿಂದ ಕೇಳಿಕೊಳ್ಳುವ ಪಾಲಕರು ಕಡಿಮೆಯಾಗುತ್ತಿರುವಂತೆ, 'ಈ ಮೇಷ್ಟರ ಕಾಲು ಮುರಿದು ಬುದ್ಧಿ ಕಲಿಸಬೇಕು? ಎಂದು ಠರಾವು ಪಾಸುಮಾಡುವ ಒಲವೂ ಹೆಚ್ಚಾಗುತ್ತಿರುವ ಲಕ್ಷಣಗಳನ್ನು ಗುರುತಿಸಿದ ಸಮಾಜ ಶಾಸ್ತ್ರಜ್ಞರು. Shift in our cultural emphasis ಎಂಬ ಪ್ರಬಂಧಕ್ಕೆ field Study ಮಾಡಲು ತಮ್ಮ ಅಧ್ಯಯನಕ್ಕೆ ನೆರವಾಗಿರಬೇಕೆಂದು ವಿದ್ಯಾರ್ಥಿ ಮುಖಂಡರಿಗೂ, ಹೆಡ್‌ಮಾಸ್ಟರ್, ಪ್ರಿನ್ಸಿಪಾಲರಿಗೂ ಸುತ್ತೋಲೆಗಳನ್ನು ಕಳಿಸಿದ್ದಾರೆಂದು ವದಂತಿ. ರಾಜಕೀಯ ಕಾರಣಗಳಿಂದ ಮೇಷ್ಟರ ಸಮರ್ಥನೆಯನ್ನೊ ಅಥವಾ ವಿದ್ಯಾರ್ಥಿಗಳ ಸಮರ್ಥನೆಯನ್ನೊ ಸಂಧರ್ಭೋಚಿತವಾಗಿ ಮಾಡಲು ಅವಕಾಶಗಳಿರುವುದರಿಂದ ಸಾಮಾನ್ಯ ಸೂತ್ರ ರೂಪದಲ್ಲಿ ಈ ಬಗ್ಗೆ ಏನನ್ನೂ ಹೇಳು ಬರುವಂತಿಲ್ಲ. ನಿರ್ದಿಷ್ಟ ಘಟನೆಯೊಂದನ್ನು ವಿಶ್ಲೇಷಿಸಿ ಮೇಷ್ಟರ ಇಲ್ಲವೆ,

ವಿದ್ಯಾರ್ಥಿಗಳ ಯೋಗ್ಯತೆ, ಬಲಾಬಲಗಳನ್ನವಲಂಬಿಸಿ ತೀರ್ಮಾನ ತೆಗೆದು ಕೊಳ್ಳಬೇಕಾಗುತ್ತದೆ. ಕೊನೆಯದಾಗಿ ನೈತಿಕ ಪ್ರಶ್ನೆ. ಇದರ ಸ್ಥಾನ ಯಾವಾಗಲು ಕೊನೆಯಲ್ಲೇ. ಎಲ್ಲಾ ನೀತಿ ದಾರಿಗಳಲ್ಲೂ ನೈತಿಕ ಅಂಶ ಅಂತರ್ಗಾಮಿಯಾಗಿ, ವಾಚ್ಯವಾಗದೆ ಹುದುಗಿರುವುದು ಸರ್ವವಿದಿತವಾದ ಸಂಗತಿ. ಅಂತೆಯೇ, ಮೇಷ್ಟ್ರನ್ನು ವಿದ್ಯಾರ್ಥಿಗಳು ಹೊಡೆಯುವಂಥ ಘಟನೆಗಳಲ್ಲೂ ಎಲ್ಲೋ ಒಂದು ನೀತಿ ಅವಿತುಕೊಂಡಿರಬಹುದು. ಬಾಹ್ಯ ಜಗತ್ತಿಗೆ ಪ್ರಕಟವಾಗಿ, ಇಗೋ ನಾನು ಇಲ್ಲಿದ್ದೇನೆ, ನೋಡಿ ಎಂದು ಘೋಷಿಸಿಕೊಳ್ಳಲು ಅದಕ್ಕೆ ಏನೋ ಸಂಕೋಚ ನಾಚಿಕೆ. ನೀತಿಯ ಜಾಯಮಾನವೇ ಅಷ್ಟು. ಸರಸ್ವತಿ ನದಿಯಂತೆ ಒಂದು Myth ಆಗಿ ಉಳಿದು ಬಿಡುತ್ತದೆ. ನೀತಿಗೆ ಛಾತಿ ಇಲ್ಲದಿರವುದರಿಂದಲೇ, ಎಲ್ಲರೂ ನೀತಿ ತಮ್ಮ ಪರವಾಗೇ ಇದೆ ಎಂದು ಹೇಳಿಕೊಳ್ಳಲು ಸಾಧ್ಯವಾಗಿದೆ. ಒಂದು ಕದನದಲ್ಲಿ, ಸೆಣಸಾಟದಲ್ಲಿ ಗೆದ್ದವರು ತಮಗೆ ಅರ್ಹವಿಜಯ ದೊರೆಕಿದೆಯೆಂದು ಹೆಮ್ಮೆಪಟ್ಟರೆ ಸೋತವರು ನೈತಿಕವಾಗಿ ಜಯ ತಮ್ಮದೇ ಎಂದು ಸಮಾಧಾನ ಪಟ್ಟು ಕೊಳ್ಳುತ್ತಾರೆ. ಇಲ್ಲಿ ನೀತಿ ಒಂದು balancing factor ಆಗಿ ಕೆಲಸಮಾಡಿ ಒಂದು ಬಗೆಯ ಸಮಾನೀಕರಣ ಶಕ್ತಿಯಾಗಿ ಕೆಲಸಮಾಡುತ್ತದೆ. ಇದೂ ಒಂದು ಮಿಥ್ ಇರಬಹುದು. ಯಾರು ಯಾವಾಗ ಎಲ್ಲಿ ಎಂತಹ ನೀತಿ ಬೇಕಾದರೂ ಅದನ್ನು ಪಡೆದು ಕೊಳ್ಳಬಹುದು. ನೀತಿಯ ನಿಲುವು ಹೀಗಿರುವಾಗ, ಎವರನಿ ಎವರು ತಿಟ್ಟೇದಿ ಎಂದು ಕೈಲಾಸಂ ಅಥವ ಮತ್ತಾರೋ ಕೇಳಿದ ಕ್ಲಾಸಿಕ್ ಪ್ರಶ್ನೆಗೆ ಉತ್ತರಿಸಬಲ್ಲ ನೈತಿಕ ಹೊಣೆಗಾರಿಕೆ ಯಾರಿಗಿದೆ?

ಎರಡು ಕನಸುಗಳು

—ಸೋಮಿ

—೧—

ಕಾಲ–1784

'ಯಾರು ಅಲ್ಲಿ?'

"ನಾನು ತ್ರಿಲೋಕ ಜನನಿ ಕೆಂಚಮ್ಮ"

"ಓ ಅಗ್ನಿವರ್ಣೆ, ಜ್ವಾಲಾರೂಪಿಣಿ, ಕರ್ಮಫಲವನ್ನು ಕೊಡುವವಳೇ, ನಿನಗೆ ನಾನು ಶರಣಾಗಿದ್ದೇನೆ. ಕಷ್ಟಗಳಿಂದ ನನ್ನನ್ನು ಪಾರುಮಾಡು"

"ತಥಾಸ್ತು. ಆದರೆ ಮೊದಲು ನನ್ನನ್ನು ನೀನು ಪಾರುಮಾಡು"

"ಆ ಶಕ್ತಿಯನ್ನು ನೀನು ನನಗೆ ಕೊಡು."

"ನಾನು ಕೊಡುವಂತಿದ್ದರೆ ನಿನ್ನನ್ನೇಕೆ ಬೇಡಲು ಬರುತ್ತಿದ್ದೆ"

"ಅದೇನು ಹೇಳು."

"ನಾನಿರುವ ಚಿಕ್ಕನ ಹಳ್ಳಿಯ ಮೇಲೆ ಪರರಾಯರು ದಂಡೆತ್ತಿ ಬಂದಿದ್ದಾರೆ. ಊರಿನ ಗೌಡ ಮಹಾಭಕ್ತ. ಆದರೆ ಅವನು ಶತ್ರುಗಳನ್ನೆದುರಿಸಲಾರ. ನನ್ನ ವಿಗ್ರಹವನ್ನು ನಿಮ್ಮ ಊರಿಗೆ ತೆಗೆದುಕೊಂಡು ಹೋಗಲು ಹೇಳಿದೆ. ನನ್ನ ಪ್ರಾಣ ಹೋದರೂ ಅಷ್ಟೇ, ಆದಾಗದು ಎಂದ, ಅವನ ಪ್ರಾಣವೂ ಹೋಗುತ್ತದೆ. ನನ್ನ ವಿಗ್ರಹವೂ ನಾಶವಾಗುತ್ತದೆ. ಅದನ್ನಿಲ್ಲಿ ತಂದು ಸ್ಥಾಪಿಸು."

(ಫಲಿತಾಂಶ : ಹೀಗಾಗಿ ಹೇಮಸಮುದ್ರದಲ್ಲಿ ಊರಿನಗುಡಿ ಸ್ಥಾಪಿತವಾಯಿತು. ಸೇವಾದಿಗಳೂ ಸಕ್ರಮವಾಗಿ ನಡೆಯುತ್ತಿದ್ದವು.)

—೨—

ಕಾಲ–1979

"ಏ, ಯಾಕೆ ಹೀಗೆ ಕಾಡುತ್ತೀ?"

"ನಿನ್ನ ಕೈಲಿ ಆಗುವುದಿಲ್ಲ. ಗುಡಿ ಕೆಡವಿಸಬೇಡ ಎಂದರೆ ನೀನು ಕೇಳಲಿಲ್ಲ. ಈಗ ನೋಡು"

"ನಿನ್ನನ್ನೇ ನಂಬಿ ನಾನು ಗುಡಿ ಕೆಡವಿಸಿದೆ."

"ಬೇಡ ಎನ್ನಲಿಲ್ಲವೇ ನಾನು"

"ಹೌದು ಆದರೆ ಹಣ ಇದ್ದರೂ ನೀನೇಕೇ ಅದು ಬೇಡ ಎಂದೆ?"

"ಹೀಗಾಗುತ್ತದೆ ಅಂತಗೊತ್ತಿತ್ತು"

"ನೀನು ಇಷ್ಟು ದೊಡ್ಡದೇವರಾಗಿದ್ದು, ನನ್ನ ಬಾಳೆಯ ತೋಟದಲ್ಲಿ ಏಕೆ ಕಳವಾಯಿತು ? ನನ್ನ ಗಂಧದ ಮರಗಳೇಕೆ ಮಾಯಾವಾದವು? ಸಿಮೆಂಟ್ ಲಾರಿ ಕೆರೆಯಲ್ಲೇಕೆ ಮುಳುಗಿತು? ನನ್ನನ್ನೇಕೆ ಪಾಪರು ಮಾಡಿದೆ? ನನ್ನ ಮನೆ ದರೋಡೆ ಆಯ್ತು?"

"ಅದನ್ನು ಕೊಟ್ಟವಳು ನಾನು ಎನ್ನುತ್ತಿದ್ದೆಯಲ್ಲಾ ಈಗ ಮರೆತು, ನನ್ನನ್ನೇಕೆ ದೂರುತ್ತೀ. ಕೊಟ್ಟೆ. ಮಾತು ಕೇಳಲಿಲ್ಲ. ಅವೆಲ್ಲಾ ಹೋದವು."

"ಛೀ, ಎಂಥಾ ದೇವರು ನೀನು? ನಾವೇ ಮಾಡಿಕೊಂಡಿದ್ದಲ್ಲವೇ?"

''ಹಾಗಾದರೆ ನೀನೇಕೆ ಬಾಳೆತೋಟದ ಕಳವು ತಪ್ಪಿಸಲಿಲ್ಲ. ಗಂಧದ ಮರಗಳನ್ನು ಉಳಿಸಿಕೊಳ್ಳಲಿಲ್ಲ? ಲಾರಿಯನ್ನೇಕೆ ಕೆರೆಗೆ ಬೀಳದಂತೆ ನೋಡಿಕೊಳ್ಳಲಿಲ್ಲ? ನನ್ನ ಗುಡಿಯನ್ನೇಕೆ ಕೆಡವಿಸಿದೆ? ನೀನದನ್ನು ಕಟ್ಟಿಸಿದ್ದೆಯಾ? ನನ್ನನ್ನು ಇಲ್ಲಿ ಸ್ಥಾಪಿಸಿದ್ದೆಯಾ?"


''ಏನೋ ಹೋಗಲಿ, ಹೊಸದಾಗಿ ಕಟ್ಟಿಸೋಣ ಅಂತ ಕಡವಿಸಿದರೆ, ಈಗ ಕಾಟ ಕೊಡುತ್ತಿದ್ದೀಯಾ?"

''ನೀನೇ ಕಾಟತಂದು ಕೊಂಡೆ, ಗುಡಿಕಟ್ಟಿಸು ಎಲ್ಲಾ ಸರಿಯಾಗುತ್ತದೆ."


"ಎಲ್ಲಾ ಸರಿಮಾಡಿದರೆ ಗುಡಿಕಟ್ಟಿಸುತ್ತೇನೆ. ಇಲ್ಲದಿದ್ದರೆ ನೀನು ಗುಡಿಯಂ ಹೊರಗೇ ಕುಳಿತಿರು"

''ನಿನ್ನ ಮನಸ್ಸಿನಲ್ಲೇ ಕುಳಿತಿರುತ್ತೇನೆ. ಆ ಮನಸ್ಸೇ ನಿನ್ನನ್ನು ಕೈ ತೊಳೆದುಕೊಂಡು ಬೆನ್ನು ಹತ್ತುತ್ತದೆ''


(ಫಲಿತಾಂಶ : ಕೆಂಚಮ್ಮನ ಉತ್ಸವಮೂರ್ತಿ ಗುಡಿಯು ಹೊರಗೇ ಕುಳಿತಿದೆ. ಸುತ್ತಮುತ್ತ ಸಮೃದ್ಧವಾಗಿ ಮಳೆಯಾದರೂ,ಊರಿನ ಹೊಲಗಳೆಲ್ಲಾ ಉರಿದು ಹೋಗಿವೆ.)




ఇది..



మరి ఇది....



నాకు ఇది....



మరి ఇది......



ఇంక పోతేసం ___



బంగారమ్మకు తిరునాలిలుండాల్సి అన్నమాట!!

ಲವ್ ಮ್ಯಾರೇಜ್

ಶಿವಕುಮಾರ್

ಈಚೀಚೆಗೆ ಏನಾಶ್ಚರ್ಯ ಅಂತೀರಿ ! ಯಾವಕೆಲಸಕ್ಕೇ ಆಗಲೀ ಚಿಕ್ಕ ವಯಸ್ಸಿನ ಹುಡುಗರನ್ನೇ ನೇಮಿಸಿಬಿಟ್ಟಿರುತ್ತಾರೆ. ಬ್ಯಾಂಕ್ ಮ್ಯಾನೇಜರ್ ಇಂದ ಹಿಡಿದು ಬಸ್ ಕಂಡಕ್ಟರ್‌ವರೆಗೂ, ಪೋಲಿಸ್ ಇನ್ಸ್‌ಪೆಕ್ಟರ್ ಇಂದ ಹಿಡಿದು ಸ್ಕೂಲ್ ಹೆಡ್ ಮಾಸ್ಟರ್‌ರವರೆಗೂ, ಯಾರನ್ನ ನೋಡಿದರೂ ತೀರ ಎಳಸು. ಇದು ನಾನು ಮಧ್ಯವಯಸ್ಸನ್ನು ದಾಟಿರುವುದರ ಚಿಹ್ನೆ ಎಂದು ಹಠಾತ್ತಾಗಿ ಗೊತ್ತಾಗಿದ್ದು, ನಮ್ಮ ಬಡಾವಣೆಯ ಯುವಕ ಯುವತಿಯರೆಲ್ಲಾ ನನ್ನನ್ನು "ಅಂಕಲ್" ಅಂತ ಕರೆಯಕ್ಕೆ ಶುರುಮಾಡಿದಾಗಿನಿಂದ.

ನಮ್ಮ ಆಚೆ ಬೀದೀಲಿರೋ ಮೋಹನ್, ಕಳೆದ ತಿಂಗಳು ಮದುವೆಯಾದಾಗ ನನ್ನನ್ನು ಆದರದಿಂದ ಮದುವೆಗೆ ಕರೆದಿದ್ದ. ವಧು ಸುರೇಖಾ ಬಲು ಚೂಟಿ ಹೆಣ್ಣು. ನಾಟಕ ನೃತ್ಯ ಇವರಲ್ಲೆಲ್ಲಾ ಬಲು ಖಯಾಲಿ. ಹೇಳಿಕೇಳಿ ಶ್ರೀಮಂತರ ಮನೆ ಹುಡುಗಿ–ಒಬ್ಬಳೇ ಮಗಳು ಬೇರೆ–ಹಾಗಾಗಿ ಕೇಳಿದ್ದೆಲ್ಲಾ ನಡೆಯುತ್ತಿತ್ತು. ಮೋಹನ್–ಸುರೇಖಾ ಹಲವು ತಿಂಗಳುಗಳಿಂದ ಒಟ್ಟಿಗೆ ಓಡಾಡುತ್ತಿದ್ದುದು ನಮ್ಮ ಬಡಾವಣೆಯಲ್ಲೆಲ್ಲಾ ಗೊತ್ತಿದ್ದ ಸುದ್ದಿ. ಹೀಗಾಗಿ ಅವರ ಮದುವೆಯ ಕರೆಯೋಲೆ ಬಂದಾಗ ನನಗೆ ಆಶ್ಚರ್ಯವೇನೂ ಆಗಲಿಲ್ಲ.

ಮದುವೆ ಆಗಿ ಸುಮಾರು ಒಂದು ತಿಂಗಳು ಆಗಿರಬಹುದು. ಮೋಹನ್ ನಮ್ಮ ಮನೆಗೆ ಬಂದ. ಜೋಲು ಮುಖ. ಆಕಾಶವೇ ತಲೆಯ ಮೇಲೆ ಕಳಚಿಬಿದ್ದ ಕಳೆ.

"ಏನು ಮೋಹನ್, ಇನ್ನೂ ಒಂದು ತಿಂಗಳು ಆಗಿಲ್ಲ ಸಂಸಾರ ಹೂಡಿ ಆಗಲೇ ಇಂಗು ತಿಂದ ಮಂಗನ ಮುಖ, ಏನಾಯ್ತು ? " ನಾನು ಸಹಜವಾಗಿಯೇ ಕೇಳಿದೆ.

"ಏನೋ ಅಂಕಲ್, ನನ್ನ ಎಲ್ಲಾ ಸಮಸ್ಯೆಗಳೂ ಮದುವೆಯ ಮೊದಲವಾರದಿಂದಲೇ ಶುರುವಾಯಿತು"

"ಯಾಕೋ ಹೀಗೆ ಮಾತಾಡ್ತೀಯಾ ? ಎಲ್ಲಾ ವಿವರವಾಗಿ ಹೇಳುಕ್ಕ ಸಂಕೋಚವೇಕೆ ? "

"ನೋಡಿ ಅಂಕಲ್, ಮದುವೆಯಾದ ಮಾರನೆಯದಿನವೇ ಮಧುಚಂದ್ರಕ್ಕೆಂದು ಕೊಡೈಕೆನಾಲ್‌ಗೆ ಹೋಗಿದ್ದೆವು. ನಾಲ್ಕು ದಿನ ಅಲ್ಲಿ ಕಳೆದ ಮೇಲೆ ಮಧುರೆ ಮಾರ್ಗ ವಾಗಿ ಊರಿಗೆ ಹಿಂತಿರುಗಿ ಬರುವ ಯೋಜನೆ. ಮಧುರೆಯಲ್ಲಿ ದೇವಸ್ಥಾನದ ಮುಂದೆ ಒಬ್ಬ ಸಾಧು ಸಿಕ್ಕ. ನಮ್ಮನ್ನು ನೋಡಿದೊಡನೆಯೇ" ನೀವು ಹೊಸದಾಗಿ ಮದುವೆ ಯಾದವರು, ಒಬ್ಬರನ್ನೊಬ್ಬರು ಬಹಳವಾಗಿ ಪ್ರೀತಿಸುತ್ತೀರ. ನಿಮ್ಮ ಈ ಗಾಢ ವಾದ ಪ್ರೀತಿ ಚಿರಾಯುವಾಗುವ ಹಾಗೆ ನಾನು ಸಹಾಯಮಾಡಬಲ್ಲೆ" ಎಂದ. ನನಗೆ ಇವರಲ್ಲೆಲ್ಲಾ ನಂಬಿಕೆ ಇಲ್ಲ, ಏನೂ ಬೇಡ ಎಂದು ಮುಂದೆ ಹೋಗೋಣ ವೆಂದರೆ, ಸುರೇಖಾ ಬಿಡ ಬೇಕಲ್ಲಾ. "ಹೇಳಿ. ಸ್ವಾಮೀಜೀ" ಎಂದು ನಿಂತೇ ಬಿಟ್ಟಳು. ಆ ಸಾಧು ಒಂದು ಸಣ್ಣ ಗಾಜಿನ ಬಾಟಲ್ ತೆಗೆದು, "ಇದರಲ್ಲಿ ಮಂತ್ರಿ ಸಿದ ಗಂಗಾಜಲವಿದೆ. ನಿಮ್ಮ ಮನೆಯಲ್ಲಿ ಒಂದು ಪವಿತ್ರ ಸ್ಥಾನದಲ್ಲಿ ಇದನ್ನಿಟ್ಟಿರಿ. ಎಂದಿನವರೆಗೆ ನೀವಿಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸುತ್ತಿರೋ ಅಲ್ಲಿಯವರೆಗೆ ಈ ಪವಿತ್ರ ಜಲ ವರ್ಣರಹಿತವಾಗಿರುತ್ತದೆ. ಯಾರಾದರೊಬ್ಬರು ಎಡವಿದರೆ, ಇದು ಗಾಢವಾದ ನೀಲಿ ಬಣ್ಣಕ್ಕೆ ತಿರುಗುತ್ತದೆ. ಇದೇ ನಿಮ್ಮ ಪ್ರೇಮಕ್ಕೆ ರಕ್ಷೆ" ಎಂದು ಹೇಳಿ ಒಂದು ರೂಪಾಯಿ ದಕ್ಷಿಣೆ ತೆಗೆದು ಕೊಂಡು ಹೊರಟುಹೋದ.

ಸರಿ, ಸುರೇಖಾ ಅದನ್ನು ಭಕ್ತಿಯಿಂದ ಮನೆಗೆ ತಂದು ಷೋಕೇಸ್ ಮೇಲೆ ಪ್ರತಿಷ್ಠಾಪಿಸಿದಳು. ಮೊನ್ನೆ ಸುರೇಖಾ ಪಾತ್ರ ವಹಿಸುತ್ತಿದ್ದ ನಾಟ್ಯ ತಂಡದವರ ನಾಟಕದಲ್ಲಿ ಪಾತ್ರವಹಿಸುವ ಸಲುವಾಗಿ, ಒಂದು ದಿನದ ಮಟ್ಟಿಗೆ ತೌರುಮನೆಗೆ ಹೊರಟಳು. ಅದೇ ಸಾಯಂಕಾಲ ನನ್ನ ಹಲವು ಆಫೀಸ್ ಗೆಳೆಯರು ನಮ್ಮ ಮನೆಗೆ ಬಂದಿದ್ದರು. ಮನೆಯಲ್ಲಿ ಹೆಂಡತಿ ಇಲ್ಲ ಅಂದ ಮೇಲೆ ಕೇಳಬೇಕೇ, ತಿಂಡಿಗಿಂತ ತೀರ್ಥವೇ ಜಾಸ್ತಿಯಾಗಿತ್ತು. ಆ ಸಂಭ್ರಮದಲ್ಲಿ ಷೋಕೇಸ್ ಮೇಲಿದ್ದ ಬಾಟಲಿ ನಮ್ಮ ಕಿರಣ್ ಕಣ್ಣಿಗೆ ಬಿತ್ತು. ಏನೋ ಇದು ಅಂತ ಅವ ಕೇಳಿದ ಮೇಲೆ ಎಲ್ಲಾ ವಿವ ರಗಳನ್ನು ಹೇಳಲೇಬೇಕಾಯಿತು. ಆಮೇಲೆ ಒಳಗೆ ಹೋಗಿ ಬರುವಷ್ಟರಲ್ಲಿ ಕಿರಣ್ ತನ್ನ ಪೆನ್ನನ್ನು ಆ ಗಂಗಾಜಲದಲ್ಲಿ ಅದ್ದಿ ಅದನ್ನು ನೀಲೀ ಬಣ್ಣಕ್ಕೆ ತಿರುಗಿಸಿದ್ದ. ಎಲ್ಲರೂ ಹೋದಮೇಲೆ ಬಾಟಲನ್ನು ತೊಳೆದು, ತಿರುಗಿ ನೀರು ತುಂಬಿಸಿಟ್ಟರಾಯಿತು ಅಂದು ಕೊಳ್ಳುತ್ತಲೇ ಇದ್ದೆ. ಆದರೆ ಎಲ್ಲರೂ ಹೊರಟಾಗ ರಾತ್ರಿ ಎರಡು ಘಂಟೆ. ಬಾಟಲ್ ಕ್ಲೀನ್ ಮಾಡೋದು ಮರೆತು ಹಾಗೇ ಮಲಗಿ ಬಿಟ್ಟೆ"


"ಸರಿ, ಸರಿ, ಗೊತ್ತಾಯಿತು ಬಿಡು, ಬೆಳಗ್ಗೆ ಸುರೇಖಾ ಬಂದು ಆ ಬಾಟಲ್ ನೋಡಿ ನಿನ್ನ ಮುಖಕ್ಕೆ ಸರಿಯಾಗಿ ಮಂಗಳಾರತಿ ಮಾಡಿರಬೇಕು. ಅದಕ್ಕೆ ಈ ಜೋಲು ಮುಖ" ಎಂದೆ.

"ಇಲ್ಲ ಅಂಕಲ್, ಹಾಗಾಗಿದ್ದರೆ ಎಷ್ಟೋ ಚೆನ್ನಾಗಿತ್ತು. ಬೆಳಗ್ಗೆ ನಾನು ಏಳುವ ಹೊತ್ತಿಗೆ, ಸುರೇಖಾ ಆಗಲೇ ಮನೆಗೆ ಬಂದು ಬ್ರೇಕ್ ಫಾಸ್ಟ್ ತಯಾರಿಸುತ್ತಿದ್ದಳು. ಫಾಬರಿಯಿಂದ ಬಾಟಲ್ ನೋಡಿದರೆ ಅದು ಶುಭ್ರವಾದ ವರ್ಣರಹಿತ ಗಂಗಾಜಲದಿಂದ ತುಂಬಿತ್ತು" ಅಂತ ದುಃಖದಿಂದ ಹೇಳಿದ.

ಯಾಕೆ ಹೇಳುಕ್ಕೆ ಬಂದೆ ಅಂದರೆ, ಈಗಿನಕಾಲದ ಮಕ್ಕಳನ್ನು ಅರ್ಥ ಮಾಡಿ ಕೋಳ್ಳೋದೇ ಕಷ್ಟ ಅಲ್ಲವೇ.

No. 23 AL/84-NT III

—: ಶುಭಾಶಯಗಳೊಂದಿಗೆ :—



ದಿ ಸಂಡೂರ್ ಮ್ಯಾಂಗನೀಸ್ ಅಂಡ್
ಐರನ್ ಓರ್ಸ್ ಲಿಮಿಟೆಡ್

ರಿಜಿಸ್ಟರ್ಡ್ ಮತ್ತು ಕಾರ್ಯ ನಿರ್ವಾಹಕ ಕಛೇರಿ :

"ಲೋಹಾದ್ರಿ ಭವನ"

ಯಶವಂತ ನಗರ್–583124 ಸಂದೂರ್ ಮಾರ್ಗ (ಬಳ್ಳಾರಿ ಡಿಸ್ಟ್ರಿಕ್ಟ್)

ಕರ್ನಾಟಕ